# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:169 • ನೋಂದಣಿ ನಂ.:KARKAN27911 • ವಿಜಯನಗರ • 29.11.2023 • ಬುಧವಾರ • ಪುಟ:04 • ಬೆಲೆ:2
Volume:01 • Issue:169 • Reg.No:KARKAN27911 • VIJAYANAGARA • 29.11.2023 • wednesday • Page:04 • Rs:2







ಮೈಕ್ರೋ ನ್ಯೂಸ್

## ನ.30ರಂದು ಕನಕದಾಸ ಜಯಂತಿ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹೊಸಪೇಟೆ ನಗರಸಭೆ ಸಹಯೋಗದಲ್ಲಿ ದಾಸ ಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ನ.30ರಂದು ಬೆಳಿಗ್ಗೆ 11.30 ಗಂಟೆಗೆ ನಗರದ ಕನಕದಾಸ ವೃತ್ತದಲ್ಲಿ ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್ ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸುವರು. ವಿಜಯನಗರ ಶಾಸಕರಾದ ಹೆಚ್.ಆರ್. ಗವಿಯಪ್ಪ ಅವರು ಅಧ್ಯಕ್ಷತೆ ವಹಿಸುವರು. ನಗರಸಭೆ ಅಧ್ಯಕ್ಷೆ ಎ.ಲತಾ ಪಾಲ್ಗೊಳ್ಳುವರು. ಸಮಾಜಿಕ ಚಿಂತಕ ವೈ.ಎನ್. ಗೌಡರ್ ಅವರು ವಿಶೇಷ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್., ಅಪರ ಜಿಲ್ಲಾಧಿಕಾರಿ ಅನುರಾಧ ಜಿ. ಉಪಸ್ಥಿತರಿರುವರು. ಅಂ–ದು ಬೆಳಿಗ್ಗೆ 9ಕ್ಕೆ ನಗರದ ಶ್ರೀ ಅಭಯಹಸ್ತ ಆಂಜನೆಯ ದೇವಸ್ಥಾನ (ರಾಮಾಲಿ ಟಾಕೀಸ್ ಹತ್ತಿರ) ದಿಂದ ಆರಂಭಗೊಂಡು ಕನಕದಾಸ ವೃತ್ತದವರೆಗೆ ನಡೆಯಲಿದೆ.

## ತೆಕ್ಕಲಕೋಟೆಯಲ್ಲಿ ಜಿಲ್ಲಾ ಮಟ್ಟದ ಜನತಾ ದರ್ಶನ ಡಿ.01ರಂದು

**ಹಂಪಿ ಟೈಮ್ಸ್ ಸಿರುಗುಪ್ಪ**

ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಡಿ.01 ರಂದು ಬೆಳಿಗ್ಗೆ 11ಕ್ಕೆ ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ತಿಳಿಸಿದ್ದಾರೆ.

ಕುಂದು ಕೊರತೆಗಳಿರುವ ಸಾರ್ವಜನಿಕರು "ಜನತಾ ದರ್ಶನ" ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು ಎಂದು ಅವರು ತಿಳಿಸಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.


**PLACE YOUR AD**
HOUSE RENT / SALE / LEASE, CHANGE OF NAME,
Notice Advertisement. & EVENT COVERAGE
Contact
9448633038
Near Valmiki Circle,
HOSAPETE-583201
Email:hampitimes@gmail.com


# ಅಧಿಕಾರಿಗಳದ್ದು ಅದೇ ರಾಗ ಅದೇ ಧ್ವನಿ

**ಸಂಸದ ವೈ.ದೇವೇಂದ್ರಪ್ಪ ಹೇಳಿಕೆ | ಅನುದಾನ ಅಧಿಕಾರಿಗಳಿದ್ದರೂ ಕೆಲಸ ಆಗ್ತಿಲ್ಲ | ಜನಪ್ರತಿನಿಧಿಗಳ ಅಳಲು ಕೇಳುವವರಾರು ಎಂಬಂತಿತ್ತು ದಿಶಾ ಸಭೆ**

**ಹಂಪಿ ಟೈಮ್ಸ್ ಹೊಸಪೇಟೆ**

ಸಕಾಲದೊಳಗೆ ಪೂರ್ಣಗೊಳ್ಳದ ಕೇಂದ್ರ ಪುರಸ್ಕೃತ ಯೋಜನೆಗಳು, ಸಭೆಗೆ ಹಾಜರಾದ ಅಧಿಕಾರಿಗಳಿಂದ ಅಪೂರ್ಣ ಮಾಹಿತಿ, ಸಭೆಗೆ ಕೆಲ ಮುಖ್ಯ ಅಧಿಕಾರಿಗಳೇ ಗೈರು, ವಿವಿಧ ಇಲಾಖೆ ಅಧಿಕಾರಿಗಳ ನಡುವೆ ಸಂಹವನ ಕೊರತೆ, ಮೇಲಾಧಿಕಾರಿಗಳೊಂದಿಗೆ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳದಿರುವುದು, ಅವೈಜ್ಞಾನಿಕ ಹಾಗೂ ಕಳಪೆ ಕಾಮಗಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳ ಕಾರ್ಯವೈಖರಿಗೆ ಸಂಸದರಾದ ವೈ.ದೇವೇಂದ್ರಪ್ಪ, ಜಿ.ಎಂ. ಸಿದ್ದೇಶ್ವರ, ಶಾಸಕ ಎನ್.ಟಿ.ಶ್ರೀನಿವಾಸ, ಜಿಲ್ಲಾಧಿಕಾರಿ ದಿವಾಕರ ಮತ್ತು ಜಿಪಂ ಸಿಇಒ ಸದಾಶಿವ ಪ್ರಭು ಗರಂ ಆಗಿದ್ದು ಸಭೆಯಲ್ಲಿ ಕಂಡಬಂತು.

ಹೌದು, ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ವಿಜಯನಗರ ಜಿಲ್ಲಾ ಪಂಚಾಯಿತಿಯು ಲೋಕಸಭಾ ಸದಸ್ಯ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ(ದಿಶಾ) ಇವರ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ದ್ವಿತೀಯ ತ್ರೈಮಾಸಿಕ ಸಭೆಯಲ್ಲಿ ಅಧಿಕಾರಿಗಳು ಅನುದಾನವನ್ನು ಸಮರ್ಪಕವಾಗಿ ಬಳಸದಿರುವುದು ಮತ್ತು ಹೊಸ ಅನುದಾನಕ್ಕಾಗಿ ಕಾಮಗಾರಿಗಳ ಪ್ರಸ್ತಾವನೆ ಸಲ್ಲಿಸದಿರುವುದಕ್ಕೆ ಜನಪ್ರತಿನಿಧಿಗಳು ಬೇಸರ ವ್ಯಕ್ತಪಡಿಸಿದರು.

ಸಂಸದ ವೈ.ದೇವೇಂದ್ರ ಮಾತನಾಡಿ, ಕೇಂದ್ರ ಸರ್ಕಾರದ ವಿವಿಧ ಅನುದಾನದಡಿ ಪಂಚಾಯತ್ ರಾಜ್ ಇಲಾಖೆಯಡಿ ಪೂರ್ಣಗೊಳ್ಳಬೇಕಿದ್ದ ಶಾಲಾ, ಅಂಗನವಾಡಿ ಸೇರಿದಂತೆ ವಿವಿಧ ಕಟ್ಟಡ ಕಾಮಗಾರಿಗಳು, ಕುಡಿಯುವ ನೀರು ಯೋಜನೆ,



ಸಾಮಾನ್ಯ ಅಡೆತಡೆಗಳಿಂದ ವಿಳಂಭವಾಗುತ್ತಿವೆ. ವಿವಿಧ ಇಲಾಖೆಯ ಅಧಿಕಾರಿಗಳು ಪರಸ್ಪರ ಸಂವಹನದೊಂದಿಗೆ ಪರಿಹರಿಸಿಕೊಳ್ಳದೇ, ಸಭೆಗಳಲ್ಲಿ ಕುಂಟು ನೆಪ ಹೇಳಿ ಬೀಸುವ ದೊಣ್ಣೆ ತಪ್ಪಿಸಿಕೊಂಡರೆ... ಆಯ್ತು ಎಂಬ ಜಾಣ ನಡೆ ಅಭಿವೃದ್ಧಿಗೆ ಮಾರಕವಾಗಲಿದೆ. ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಪೂರ್ಣಪ್ರಮಣದಲ್ಲಿ ಬಳಸದಿದ್ದರೆ ಮುಂಬರುವ ಅನುದಾನಕ್ಕೂ ಕೊಕ್ಕೆ ಬೀಳುತ್ತದೆ. ಪರಿಪೂರ್ಣ ಮಾಹಿತಿಯೊಂದಿಗೆ ಸಿದ್ಧರಾಗದೇ ಸಭೆಗೆ ಬರುವ ಅಧಿಕಾರಿಗಳದ್ದು ಅದೇ ರಾಗ ಅದೇ ಧ್ವನಿಯಾಗಿದೆ ಎಂದು ಸಂಸದ ವೈ.ದೇವೇಂದ್ರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಸಂಸದರ ಪ್ರಶ್ನೆಗಳಿಗೆ ಉತ್ತರಿಸಲು ಚಡಪಡಿಸಿದ ಅಧಿಕಾರಿಗಳಿಗೆ ಮಾಹಿತಿ ಇಲ್ಲದಿದ್ರೆ ಸಭೆಗೆ ಬರಬೇಡ್ರಿ ಎಂದು ಸಂಸದರು ತರಾಟೆ ತೆಗೆದುಕೊಂಡರು. ಹಿಂದಿನ ಸಭೆಗಳಲ್ಲಿ ಚರ್ಚಿಸಿದ ಸಮಸ್ಯೆಗಳಿಗೆ ಹೇಳಿದ್ದ ಉತ್ತರವನ್ನೇ ಈ ಸಭೆಯಲ್ಲಿ ಹೇಳುತ್ತಿದ್ದೀರಿ, ಏನು ಕೆಲಸ ಮಾಡುತ್ತಿದ್ದೀರಿ? ಎಂದರು. ದಿಶಾ ಸಮಿತಿಯ ನಾಮನಿರ್ದೇಶಿತ ಸದಸ್ಯೆ ಸುಶ್ಮಾ ಧ್ವನಿಗೂಡಿಸಿ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಪಟ್ಟಿಯನ್ನು ಒಂದು ವಾರ ಮುಂಚಿತವಾಗಿ ಅಧಿಕಾರಿಗಳು ನೀಡದೆ ಒಂದು ದಿನ ಮುಂಚೆ ನೀಡಿದ್ದಾರೆ. ಮತ್ತೊಂದು ಸಭೆಗೆ ಮೂರು ತಿಂಗಳು ಕಾಯಬೇಕಿದೆ. ಸಮಸ್ಯೆಗಳಿಗೆ ಪರಿಹಾರವೇ ಸಿಗದಂತಗಾಗಿದೆ ಎಂದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾತನಾಡಿ, ನಗರ ಪ್ರದೇಶಗಳಲ್ಲಿ ಫಾರಂ ತ್ರಿ ನೀಡಲಾಗುತ್ತಿದೆ. ಗ್ರಾಮಾಂತಕ್ಕೂ ವಿಸ್ತರಿಸಬೇಕೆಂಬ ಒತ್ತಾಯ ಹೆಚ್ಚಿದೆ. ತಾಲೂಕು ಹಂತದ ಅಧಿಕಾರಿಗಳು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮನೆ ಮನೆಗೆ ತೆರಳಿ ಇ–ಸ್ವತ್ತು ಅಭಿಯಾನದಡಿ ಅರ್ಜಿ ಸ್ವೀಕರಿಸಿ, ಕ್ರಮಬದ್ಧ ದಾಖಲೆಗಳಿದ್ದಲ್ಲಿ ಮನೆ ಬಾಗಿಲಿಗೆ ಇ–ಸ್ವತ್ತು ತಲುಪಿಸಬೇಕು. ಸಂಸದ ವೈ. ದೇವೇಂದ್ರಪ್ಪ ಅವರ ಊರಿನಿಂದಲೇ ಅಭಿಯಾನ ಆರಂಭಗೊಳ್ಳಲಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸರ್ಕಾರಿ ಶಾಲೆಗಳ ಆವರಣದಲ್ಲಿ ಸ್ಥಳವಿದ್ದರೆ ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಬಹುದು. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರಿ ಸ್ಥಳವಿದ್ದರೆ ತಿಳಿಸಿ ಕೂಡಲೇ ಕಟ್ಟಡಕ್ಕೆ ಜಾಗದ ವ್ಯವಸ್ಥೆ ಮಾಡಲಾಗುವುದು ಎಂದರು.

ಡಿಎಚ್ಒ ಶಂಕರನಾಯ್ಕ ಮಾತನಾಡಿ, ಜಿಲ್ಲಾ ಕೇಂದ್ರ ಹೊಸಪೇಟೆ ನಗರದಲ್ಲಿ 45 ಡೆಂಘೆ ಪ್ರಕರಣಗಳಿವೆ ಇನ್ನುಳಿದ ತಾಲೂಕುಗಳಲ್ಲಿ ಡೆಂಘೆ ಪ್ರಕರಣಗಳು ಪತ್ತೆಯಾಗಿವೆ ಎಂದರು ಮಾಹಿತಿ ನೀಡಿ, ಅಗತ್ಯ ಕ್ರಮಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಕೂಡ್ಲಿಗಿ ತಾಲೂಕಿನ ತೂಳಹಳ್ಳಿ ಸೇರಿದಂತೆ ಗಡಿಗ್ರಾಮಗಳಿಗೆ ಇದೂವರೆಗೆ ರಸ್ತೆ ದುರಸ್ತಿಗೊಂಡಿಲ್ಲ. ಹೆರಿಗೆ ಸಂದರ್ಭದಲ್ಲಿ ಗರ್ಭಿಣಿಯರು ಊರು ದಾಟಲಾಗದ ಪರಿಸ್ಥಿತಿ ಇದೆ. ಕನಿಷ್ಠ ತೂಳಹಳ್ಳಿಗೆ ಅಂಬ್ಯುಲೆನ್ಸ್ ನೀಡಬೇಕು ಎಂದು ಶಾಸಕ ಎನ್.ಟಿ.ಶ್ರೀನವಾಸ ಒತ್ತಾಯಿಸಿದರು. ಜಿಲ್ಲಾ ಮಟ್ಟದ ಅಧಿಕಾರಿಗಳು ತಾಲೂಕಿಗೆ ಭೇಟಿ ನೀಡದ್ದರಿಂದ ಪ್ರಗತಿಗೆ ಹಿನ್ನಡೆಯಾಗಿದೆ. ತಾಲೂಕು ಮಟ್ಟದ ಅಧಿಕಾರಿಗಳ ಬಳಿಯೂ ಮಾಹಿತಿ ಕೊರತೆ ಕಾಣಿಸುತ್ತದೆ. ಉದ್ಯೋಗ ಖಾತ್ರಿಯಡಿ ಮಾನವ ದಿನಗಳ ಸೃಜನೆಯಾಗಬೇಕು ಎಂದು ಒತ್ತಾಯಿಸಿದರು. ಕೃಷಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಿದ್ದ ವರದಿ ಒಪ್ಪಿಸಿದರು

# ಶೀಘ್ರವೇ ಬರ ಪರಿಹಾರ

**ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿಕೆ**



**ಹಂಪಿ ಟೈಮ್ಸ್ ಬಳ್ಳಾರಿ**

ಬೆಳೆ ವಿಮೆ ಪರಿಹಾರಕ್ಕೆ ಸಂಬಂಧಪಟ್ಟಂತೆ, ಕೇಂದ್ರ ಕೃಷಿ ಸಚಿವರೊಂದಿಗೆ ಈಗಾಗಲೇ ಸಭೆ ನಡೆಸಿದ್ದು, ರೈತರಿಗೆ ಶೀಘ್ರದಲ್ಲಿ ಬರ ಪರಿಹಾರ ಒದಗಿಸಲು ಕ್ರಮ ವಹಿಸಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಅವರು, ಮಂಗಳವಾರದಂದು ಜಿಲ್ಲೆಯ ಸಂಡೂರು ತಾಲ್ಲೂಕಿನ ಕೋಡಾಲು ಹಾಗೂ ರಾಜಾಪುರ ಗ್ರಾಮಗಳ ವ್ಯಾಪ್ತಿಯ ರೈತರ ಹತ್ತಿ, ನವಣೆ ಮತ್ತು ಸಜ್ಜೆ ಜಮೀನುಗಳಿಗೆ ಭೇಟಿ ನೀಡಿ, ಮಳೆ ಇಲ್ಲದೆ ಅನಾವೃಷ್ಠಿಯಿಂದ ಹಾಳಾಗಿರುವ ಬೆಳೆ ಹಾನಿ ಪರಿಶೀಲನೆ ನಡೆಸಿದರು.

ಸಂಡೂರು ತಾಲ್ಲೂಕಿನ ಕೋಡಾಲು ಗ್ರಾಮ ವ್ಯಾಪ್ತಿಯ ರೈತ ಮಾರೆಪ್ಪನ ನವಣೆ, ಹತ್ತಿ ಬೆಳೆ ವೀಕ್ಷಣೆ ಮಾಡಿ, ಬೆಳೆ ಹಾನಿ ಕುರಿತು ಅಧಿಕಾರಿಗಳು ಹಾಗೂ ರೈತರಿಂದ ಮಾಹಿತಿ ಪಡೆದುಕೊಂಡರು.

ಫೋಟ್ಸ್ ಐಡಿಯಲ್ಲಿ ರೈತರು >>4

# ಮಕ್ಕಳಲ್ಲಿನ ಪ್ರತಿಭೆ ಹೊರಹಾಕಲು ಪ್ರತಿಭಾ ಕಾರಂಜಿ ಉತ್ತಮ ವೇದಿಕೆ



**ಹಂಪಿ ಟೈಮ್ಸ್ ಬಳ್ಳಾರಿ**

ಶಾಲಾ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಅವರ ಪ್ರತಿಭೆಯನ್ನು ಹೊರಹಾಕುವಲ್ಲಿ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವದಂತಹ ಕಾರ್ಯಕ್ರಮಗಳು ಸಹಕಾರಿ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಬಿ.ಉಮಾದೇವಿ ಅವರು ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಕೋಟೆ ಪ್ರದೇಶದಲ್ಲಿರುವ ಸಂತಜಾನ್ ಪ್ರೌಢಶಾಲೆ ಆವರಣದಲ್ಲಿ ಮಂಗಳವಾರ ಏರ್ಪಡಿಸಿದ್ದ 2023–24ನೇ ಸಾಲಿನ ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿಯೊಂದು ಮಕ್ಕಳಲ್ಲಿ ಒಂದೊಂದು ಶಕ್ತಿ(ಪ್ರತಿಭೆ) ಅಡಗಿದ್ದು, ಅವುಗಳನ್ನು ಗುರುತಿಸಿ ಸೂಕ್ತ ವೇದಿಕೆ ಕಲ್ಪಿಸಿ ಅವರನ್ನು ಪ್ರೋತ್ಸಾಹಿಸುವ ಕೆಲಸ ನಮ್ಮ ಶಿಕ್ಷಕರು ಹಾಗೂ ಪೋಷಕರು ಮಾಡಬೇಕು ಎಂದು ಅವರು ಸಲಹೆ ನೀಡಿದರು.

ಶಾಲಾ ಮಕ್ಕಳಿಗೆ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಿಗೆ ಒತ್ತು ನೀಡುವ ಕೆಲಸವನ್ನು ಶಿಕ್ಷಕರು ಮಾಡಬೇಕು. ಪಾಠದ ಜತೆಗೆ ಕಲೆ ಮತ್ತು ಸಂಸ್ಕೃತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ತಿಳಿಸುವ ಕೆಲಸ ಮಾಡಬೇಕು ಎಂದರು. ನಮ್ಮ ಜಿಲ್ಲೆಯ ಹೆಚ್ಚಿನ ಮಕ್ಕಳು ರಾಜ್ಯಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಮಿಂಚಿ, ಹೆಚ್ಚಿನ ಪ್ರಶಸ್ತಿಗಳನ್ನು ತರುವುದರ ಮೂಲಕ ಜಿಲ್ಲೆಗೆ ಕೀರ್ತಿ ತನ್ನಿ ಎಂದು ಶುಭ ಹಾರೈಸಿದರು.

ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿಗೆ ನಿಯೋಜಿತರಾದ ತೀರ್ಪುಗಾರರರು ಅತ್ಯಂತ ನಿಷ್ಪಕ್ಷಪಾತವಾಗಿ ಪ್ರತಿಭಾವಂತರನ್ನು ಆಯ್ಕೆ ಮಾಡಬೇಕು ಎಂದು ಅವರು ಸಲಹೆ ನೀಡಿದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ನೋಡೆಲ್ ಅಧಿಕಾರಿ ವಿರೇಶಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರತಿಭಾಕಾರಂಜಿಯ ಧ್ಯೇಯೊದ್ದೇಶಗಳನ್ನು ವಿವರಿಸಿದರು. ಜಿಲ್ಲಾ ಮಟ್ಟದ ಪ್ರತಿಭಾ >>3




ಹಂಪಿ ಟೈಮ್ಸ್
HAMPI TIMES

## ವಚನ ಅರಿವು

### ಸಹಜ ದೈವ ಸರಿ

**ಅರಗು ತಿಂದು ಕರಗುವ ದೈವವನೆಂತು ಸರಿಯೆಂಬೆನಯ್ಯಾ?**
**ಉರಿಯ ಕಂಡಡೆ ಮುರುಟುವ ದೈವವನೆಂತು ಸರಿಯೆಂಬೆನಯ್ಯಾ?**
**ಅವಸರ ಬಂದರೆ ಮಾರುವ ದೈವವನೆಂತು ಸರಿಯೆಂಬೆನಯ್ಯಾ?**
**ಅಂಜಿಕೆಯಾದರೆ ಹೂಳುವ ದೈವವನೆಂತು ಸರಿಯೆಂಬೆನಯ್ಯಾ?**
**ಸಹಜಭಾವ ನಿಜೈಕ್ಯ ಕೂಡಲಸಂಗಮದೇವನೊಬ್ಬನೆ ದೇವ.**
**– ಬಸವಣ್ಣ**

ಆ ದೇವರು ಈ ದೇವರು ಎಂದು ಬಗೆ ಬಗೆಯ ದೇವರ ವಿಗ್ರಹಗಳನ್ನು ಮಾಡಿ, ಪೂಜೆ, ಪುನಸ್ಕಾರ ಮಾಡುವ ರೂಢಿ ಅದೆಗೋ ಪದ್ಧತಿಯಾಗಿಬಿಟ್ಟಿದೆ. ಅದನ್ನು ಸಮಾಜ ಚಾಚು ತಪ್ಪದೇ ಪಾಲಿಸುತ್ತಿದೆ. ಅರಗು, ಮೇಣದಿಂದ ಮಾಡಿದ ವಿಗ್ರಹಗಳು ಬೆಂಕಿಯ ಜಳ ತಾಕಿದ ತಕ್ಷಣವೇ ಕರಗಿಬಿಡುತ್ತವೆ. ಶಾಖಕ್ಕೆ ಕರಗುವ ವಸ್ತು ದೇವರಾಗಲಾರದು. ಮನುಷ್ಯನಿಗೆ ಸ್ವಲ್ಪ ಹಣ ಬಂದ ತಕ್ಷಣ ಬೆಳ್ಳಿ, ಬಂಗಾರ, ಹಿತ್ತಾಳೆ ಲೋಹಗಳಿಂದ ದೇವರನ್ನು ಮಾಡಿ ಪೂಜಿಸಲು ಶುರು ಮಾಡುತ್ತಾನೆ. ಮುಂದೆ ಬಡತನ ಬಂದರೆ ಅವೇ ವಿಗ್ರಹಗಳನ್ನು ಮಾರಿ ತಮ್ಮ ಕಷ್ಟ ನಿವಾರಿಸಿಕೊಳ್ಳುತ್ತಾನೆ. ಮಾರುವ ಲೋಹಗಳ ವಿಗ್ರಹಗಳು ಹೇಗೆ ದೇವರಾಗುತ್ತವೆ? ಇನ್ನೂ ಕೆಲವು ದೇವರುಗಳನ್ನು ಉಗ್ರಸ್ವರೂಪಿಗಳಾಗಿ ಚಿತ್ರಿಸಲಾಗಿರುತ್ತದೆ. ನಡೆದುಕೊಳ್ಳದಿದ್ದರೆ ಅಂತಹ ದೇವರು ಮನುಷ್ಯರಿಗೆ ಕೇಡು ಮಾಡಿ, ಕಾಟ ಕೊಡುತ್ತವೆ ಎಂದು ನಂಬಿಸಿಬಿಟ್ಟಿದ್ದಾರೆ. ಹೀಗೆ ಅಂಜಿಸುವಂತಹ ದೇವರುಗಳನ್ನು ನೆಲದಲ್ಲಿ ಹೂತು, ಬಚ್ಚಿಟ್ಟು ಆರಾಧಿಸುವುದೋ, ಇಲ್ಲ ಕಾಟ ತಪ್ಪಿತು ಅಂತ ಮರೆತುಬಿಡುವುದು ಮಾಡುತ್ತಿರುತ್ತಾರೆ ಜನ. ಇವು ದೈವಗಳಲ್ಲ ಇಂತಹ ದೈವಗಳನ್ನು ನಿರಾಕರಿಸಿ, ಸಹಜಭಾವದಲ್ಲಿರುವ ಚೈತನ್ಯವಾಗಿರು ವಂತಹ ದೇವರಲ್ಲಿ ವಿಶ್ವಾಸವಿರಿಸಿಕೊಳ್ಳಬೇಕು.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಹಗರಿಬೊಮ್ಮನಹಳ್ಳಿಯಲ್ಲಿ ಮನೆ ಮನೆಗೆ ಫಾರಂ ತ್ರಿ ವಿತರಣೆ

**ಹಂಪಿ ಟೈಮ್ಸ್ ಎಚ್.ಬಿ.ಹಳ್ಳಿ:**
ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರ ಸೂಚನೆ ಮೇರೆಗೆ ಹಗರಿಬೊಮ್ಮನಹಳ್ಳಿ ಪುರಸಭೆಯಿಂದ ಮನೆ ಮನೆಗೆ ತೆರಳಿ ನಮೂನೆ 3ನ್ನು ವಿತರಣೆ ಮಾಡಲಾಗುತ್ತಿದೆ. ಪ್ರತಿ ವರ್ಷ ಮನೆ ವಾರಸುದಾರರು ತೆರಿಗೆ ಕಟ್ಟುತ್ತಿದ್ದರೂ ತಮ್ಮದೇ ಆಸ್ತಿಯ ದಾಖಲಾತಿಯನ್ನು ಪಡೆಯಲು ಹರಸಾಹಸಪಡುವಂತಾಗಿತ್ತು. ಜಿಲ್ಲಾಧಿಕಾರಿಗಳು ನಗರ, ಪಟ್ಟಣ ಸೇರಿದಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಇ-ಸ್ವತ್ತು ಅಭಿಯಾನ ಹಮ್ಮಿಕೊಂಡು ಮನೆ ವಾರಸುದಾರರಿಂದ ನೇರವಾಗಿ ಅರ್ಜಿ ಪಡೆದು ಇ-ಸ್ವತ್ತು ವಿತರಿಸಬೇಕೆಂದು ಹೇಳಿರುವ ಖಡಕ್ ಸೂಚನೆಯನ್ನು ಸಂಬಂಧಿಸಿದ ಅಧಿಕಾರಿಗಳು ಅನುಷ್ಠಾನಗೊಳಿಸಲು ಮುಂದಾಗಿದ್ದಾರೆ. ಜಿಲ್ಲಾಧಿಕಾರಿಗಳ ಕ್ರಮಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬಳಸುವವರಿಗಿಂತ ಬೆಳೆಸುವವರ ಅಗತ್ಯವಿದೆ



ಭಾರತೀಯ ಜಾವಲಿನ್ ಎಸೆತಗಾರ ಕಿಶೋರ್ ಜೆನಾ ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತರಾಗಿದ್ದಾರೆ ಮತ್ತು ನೀರಜ್ ಚೋಪ್ರಾ ನಂತರ ಭಾರತದ ಎರಡನೇ ಅತಿ ದೂರ ಜಾವೆಲಿನ್ ಎಸೆದ ಎಸೆತಗಾರರಾಗಿದ್ದಾರೆ.

ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾದ ಹ್ಯಾಂಗ್‌ಝೌ 2023 ರ ಏಷ್ಯನ್ ಗೇಮ್ಸ್‌ನಲ್ಲಿ ನೀರಜ್ ರವರು ಬಂಗಾರದ ಪದಕ ಪಡೆದರೆ,ನಮ್ಮವರಿಗೆ ತೀವ್ರ ಪೈಪೋಟಿ ನೀಡಿ ಬೆಳ್ಳಿ ಪದಕ ಪಡೆದು ನಿಜಕ್ಕೂ ಅದ್ಭುತ ಸಾಧನೆಯನ್ನೇ ಮಾಡಿದ್ದಾರೆ.

ಹ್ಯಾಂಗ್‌ಝೌಗೆ ಹೋಗುವಾಗ,ಜೆನಾ ಅವರ ಹೆಸರು ಭಾರತದಲ್ಲಿನ ಕೆಲವು ಅಥ್ಲೆಟಿಕ್ಸ್ ಅಭಿಮಾನಿಗಳಿಗೆ ಮಾತ್ರ ತಿಳಿದಿತ್ತು ಆದರೆ ಅವರು ಚೀನಾದಿಂದ ಹೊಸ ತಾರೆಯಾಗಿ ಮರಳಿದರು ಕೆಲವೇ ವರ್ಷಗಳ ಹಿಂದೆ ಜಾವೆಲಿನ್ ಥ್ರೋ ಅನ್ನು ಪೂರ್ಣಾವಧಿಯಲ್ಲಿ ಅಭ್ಯಾಸ ನಿರತರಾದ ಇವರಿಗೆ ಇದುವೇ ದೊಡ್ಡ ಸಾಧನೆಯಾಗಿದೆ. 06-09-1995 ರಂದು ಒಡಿಶಾದ ಪುರಿಯ ಸಮೀಪದ ಕೊಥಾಸಾಹಿ ಗ್ರಾಮದಲ್ಲಿ ಜನಿಸಿದ ಕಿಶೋರ್ ಕುಮಾರ್ ಜೆನಾ ತಂದೆ-ರೈತಾಪಿ ಕೇಶಬ್ ಜೆನಾ ತಾಯಿ-ಹರಪ್ರಿಯಾ. ಒಟ್ಟು ಏಳು ಮಕ್ಕಳಲ್ಲಿ ಇವರು ಕಿರಿಯವರು. ತನ್ನ ಕುಟುಂಬಕ್ಕೆ ಆಸರೆಯಾಗುವ ನಿಟ್ಟಿನಲ್ಲಿ ತಾನು ಕ್ರೀಡಾಭ್ಯಾಸ ಮಾಡಿ ಪದಕಗಳನ್ನು ಗೆದ್ದು ಹೇಗಾದರೂ ಕ್ರೀಡಾ ಕೋಟದಡಿ ಸೇನೆಯಲ್ಲಿ ನೌಕರಿ ಪಡೆಯಬೇಕೆಂಬ ಇಂಗಿತವನ್ನು ಇವರು ಹೊಂದಿದ್ದರು, ಕಾರಣ ಬಡತನ. ಆದಾಗ್ಯೂ,ಜಾವೆಲಿನ್ ಎಸೆತವು ಇವರ ಮೊದಲ ಆಯ್ಕೆಯಾಗಿರದೆ. ವಾಲಿಬಾಲ್ ಆಗಿತ್ತು,ಒಡಿಶಾ ಸರ್ಕಾರದ ಭುವನೇಶ್ವರದ ಕ್ರೀಡಾ ನಿಲಯದಲ್ಲಿ ತರಬೇತಿ ಪಡೆಯುತ್ತಿದ್ದರು.ಇವರನ್ನು ಮಾಜಿ ಒಡಿಶಾ ರಾಜ್ಯ ಚಾಂಪಿಯನ್ ಲಕ್ಷ್ಮಣ್ ಬರಲ್ ಅವರು ಇವರ ದೈಹಿಕ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಿ ಇವರಿಗೆ ಸೂಕ್ತವಾದ ಆಟ ವಾಲಿಬಾಲ್ ಅಲ್ಲ ಎಂಬುದನ್ನು ಮನವರಿತು ಜಾವೆಲಿನ್‌ಗೆ ಪರಿಚಯಿಸಿ,ತಮ್ಮ ಸ್ವಂತ ಹಣದಲ್ಲಿಯೇ ಇವರಿಗೆ ಜಾವಲಿನನ್ನು ಖರೀದಿಸಿ ನೀಡಿ ತರಬೇತಿ ಹೊಂದಲು ಪ್ರೋತ್ಸಾಹಿಸಿದರು.

ಆದರೂ ವಾಲಿಬಾಲ್ ಕ್ರೀಡೆ ಮೇಲಿನ ಆಸಕ್ತಿ ಕಡಿಮೆ ಮಾಡಿಕೊಳ್ಳದೆ ಅಭ್ಯಾಸವನ್ನು ಮುಂದುವರೆಸುವುದರು. ಜೆನಾ ಭುವನೇಶ್ವರದ ಕ್ರೀಡಾ ಹಾಸ್ಟೆಲ್‌ನಲ್ಲಿ ತರಬೇತುದಾರ ನಿಲಮಾಧಬ್ ಡಿಯೋ ಅವರ ಅಡಿಯಲ್ಲಿ ಜಾವೆಲಿನ್ ಎಸೆತದಲ್ಲಿ ತರಬೇತಿಯನ್ನು ಪ್ರಾರಂಭಿಸಿದರು. ಜೆನಾ ಅವರ ಮಧ್ಯಮ ಎತ್ತರವು ವಾಲಿಬಾಲ್ ಆಟಗಾರನಾಗಿ ಅವರ ಬೆಳವಣಿಗೆಗೆ ಅಡ್ಡಿಯಾಯಿತು. ಇವರ ಎತ್ತರ 5 ಅಡಿ 8 ಇಂಚು.

ಈ ಹಂತದಲ್ಲಿಯೇ ಒಡಿಶಾದ ಅಥ್ಲೀಟ್ ಜಾವೆಲಿನ್ ಎಸೆತದತ್ತ ಹೆಚ್ಚಿನ ಗಮನ ಹರಿಸಲು ನಿರ್ಧರಿಸಿದರು.2017 ರಲ್ಲಿ 72.77 ಮೀ ಎಸೆಯುವ ಮೂಲಕ ರಾಜ್ಯ ದಾಖಲೆಯನ್ನು ನಿರ್ಮಿಸಿದರು.

2018 ರಲ್ಲಿ ಭೋಪಾಲ್‌ನಲ್ಲಿ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್ಎಫ್)ಯಲ್ಲಿ ಉದ್ಯೋಗವನ್ನು ಪಡೆದರು.ತಂದೆ-ಕೇಶಬ್ ಅಪಘಾತಕ್ಕೊಳಗಾದ ಕಾರಣ ಅವರ ಕುಟುಂಬವನ್ನು ಪೋಷಿಸಲು ಜೆನಾಗೆ ಉದ್ಯೋಗವು ತುಂಬಾ ಅಗತ್ಯವಾಗಿತ್ತು. ತಂದೆಯವರು ಮುಂದೆ ಪಾರ್ಶ್ವ ವಾಯುವಿಗೆ ಒಳಗಾಗಿ ಕೃಷಿ ಕಾರ್ಯದಲ್ಲಿ ತೊಡಗದಂತೆ ಅವರನ್ನು ಜರ್ಜರಿತಗೊಳಿಸಿತು.ಜೆನಾ ಇವರಿಗೆ ಉದ್ಯೋಗ ದೊರಕಿದ್ದು ತುಂಬಾ ಅನುಕೂಲವಾಯಿತು.

ಜೆನಾ ತನ್ನ ಉದ್ಯೋಗದ ಮೇಲೆ ಕೇಂದ್ರೀಕರಿಸುವ ಮತ್ತು ತನ್ನ ಉದ್ಯೋಗದಾತರಿಗೆ ಪೋಲಿಸ್ ಈವೆಂಟ್‌ಗಳಲ್ಲಿ ಪದಕಗಳನ್ನು ಗೆಲ್ಲುವುದರಲ್ಲಿ ತೃಪ್ತಿ ಹೊಂದಿದ್ದಾಗ, ಸಿಐಎಸ್ಎಫ್‌ನಲ್ಲಿ ಥ್ರೋಯಿಂಗ್ ಈವೆಂಟ್‌ಗಳ ತರಬೇತುದಾರ ಜಗ್ಬೀರ್ ಸಿಂಗ್, ಕಿಶೋರ್ ಜೆನಾ ಇವರು ಎಸೆತಕ್ಕೆ ಸರಿಯಾದ ದೈಹಿಕ ಸಿರಿಯನ್ನು ಹೊಂದಿದ್ದಾರೆ ಎಂದು ಮನವರಿತರು ಹೆಚ್ಚಿನ ತರಬೇತಿಯಲ್ಲಿ ತೊಡಗಲು ಪ್ರೋತ್ಸಾಹ ಮತ್ತು ಮಾರ್ಗದರ್ಶನ ನೀಡಿದರು.

ಒಂದು ಕಡೆ ಕುಟುಂಬಕ್ಕಾಗಿ ತಾನೇ ದುಡಿಯಬೇಕು ಹೀಗಿದ್ದಾಗ ತನಗೆ






**ಡಾ.ಸುಧಾಕರ.ಜಿ.ಲಕ್ಕವಳ್ಳಿ**
**ಚಿಕ್ಕಮಗಳೂರು**

ಹೇಗೆ ತಾನೇ ಉತ್ತಮ ಸಾಮರ್ಥ್ಯವನ್ನು ಪ್ರದರ್ಶಿಸಲು ಸಾಧ್ಯ ಎಂಬುದಾಗಿ ಪತ್ರಿಕೆ ಸಂದರ್ಶನವೊಂದಕ್ಕೆ ಉತ್ತರಿಸುತ್ತಾರೆ ಎಂದರೆ ಇವರ ಪರಿಸ್ಥಿತಿಯನ್ನು ನಾವು ಯೋಚಿಸಬೇಕಾಗುತ್ತದೆ. ಇಂತಹ ಮಾನಸಿಕ ಸ್ಥಿತಿವುಳ್ಳ ಕ್ರೀಡಾಪಟು ಸಾಮರ್ಥ್ಯ ತೋರಿಸುವಲ್ಲಿ ವಿಫಲನಾಗುತ್ತಾನೆ. ಆದರೆ ಈತನ ತರಬೇತುದಾರರು ಇವರ ಸಾಮರ್ಥ್ಯದ ಮೇಲೆ ಅಗಾಧವಾದ ನಂಬಿಕೆಯನ್ನು ಹೊಂದಿದ್ದ ಕಾರಣದಿಂದಾಗಿ ಇವರನ್ನು ಪಟಿಯಾಲದಲ್ಲಿರುವ ಕ್ರೀಡಾ ತರಬೇತಿ ಸಂಸ್ಥೆಯಲ್ಲಿ ತರಬೇತು ಮುಂದುವರಿಸಲು ತಾವು ಕ್ವಾಲಿಫೈಲಿಂಗ್ ಮಾರ್ಕನ್ನು ದಾಟಿಸಿದರೆ ಶಿಫಾರಸ್ಸು ಮಾಡುವುದಾಗಿ ಭರವಸೆಯನ್ನು ನೀಡಿದರು.

ಜೆನಾ ಅಂತಿಮವಾಗಿ 2021 ರಲ್ಲಿ ಒಡಿಶಾ ರಾಜ್ಯ ಚಾಂಪಿಯನ್‌ಶಿಪ್‌ನಲ್ಲಿ 76 ಮೀಟರ್‌ಗಳಿಗಿಂತ ಹೆಚ್ಚು ಎಸೆಯುವ ಮೂಲಕ,ನಂತರದ ವರ್ಷ ಜೂನ್‌ನಲ್ಲಿ ಚೆನ್ನೈನಲ್ಲಿ ನಡೆದ ಅಂತರ-ರಾಜ್ಯ ಚಾಂಪಿಯನ್‌ಶಿಪ್‌ನಲ್ಲಿ 77 ಮೀಟರ್ ಎಸೆದು ತರಬೇತುದಾರರ ಮಾತಿನಂತೆ ಜೆನಾ ರಾಷ್ಟ್ರೀಯ ಶಿಬಿರಕ್ಕೆ ತರಬೇತಿಗಾಗಿ ಸೇರ್ಪಡೆಗೊಂಡರು.

ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತ ಸಮರ್‌ಜೀತ್ ಸಿಂಗ್ ಮಲ್ಹಿ ಅವರ ತರಬೇತುದಾರರಾಗಿ ಮತ್ತು ಸರಿಯಾದ ಆಹಾರ ಮತ್ತು ತರಬೇತಿ ವೇಳಾಪಟ್ಟಿಯೊಂದಿಗೆ ಪಡೆಯಲಾರಂಭಿಸಿದರು. ಇವರ ಎಸೆತಗಳ ಪಟ್ಟಿಯನ್ನು ನೋಡುವುದಾದರೆ,ಇವರು ಬೆಂಗಳೂರಿನಲ್ಲಿ ನಡೆದ ನ್ಯಾಶನಲ್ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ 2022-78.05 ಮೀಟರ್ ದೂರ ಎಸೆಯುದರೊಂದಿಗೆ ಕಂಚಿನ ಪದಕವನ್ನು ಗೆದ್ದರು.

2023-ಬಳ್ಳಾರಿಯಲ್ಲಿ ನಡೆದ ಇಂಡಿಯನ್ ಓಪನ್ ಥ್ರೋ ಸ್ಪರ್ಧೆಯಲ್ಲಿ ಚಿನ್ನದೊಂದಿಗೆ ಋತುವನ್ನು ಪ್ರಾರಂಭಿಸಿ,ತಮ್ಮ ವೈಯಕ್ತಿಕ ಅತ್ಯುತ್ತಮ ಸಾಧನೆ 78.93 ಮೀಟರ್ ದೂರವನ್ನು ತಮ್ಮ ಹೆಸರಿನಲ್ಲಿ ನಮೂದಿಸಿದರು. 2023-ತಿರುವನಂತಪುರಂನಲ್ಲಿ ನಡೆದ ಇಂಡಿಯನ್ ಗ್ರ್ಯಾಂಡ್ ಪ್ರಿಕ್ಸ್‌ನಲ್ಲಿ ಇವರು ಮೊದಲ ಬಾರಿಗೆ 80 ಮೀಟರ್ ಎಸೆದರಲ್ಲದೆ,81.05 ಮೀಟರ್ ಎಸೆಯುವ ಮೂಲಕ ಮತ್ತೊಂದು ಚಿನ್ನವನ್ನು ಪಡೆದರು.ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಬೆಳ್ಳಿಗಾಗಿ 82.87 ಮೀಟರ್‌ಗೆ ತಮ್ಮ ಮಾರ್ಕ್ ನ್ನು ಸುಧಾರಿಸಿದರು ಮತ್ತು ಶ್ರೀಲಂಕಾ ನ್ಯಾಷನಲ್ಸ್‌ನಲ್ಲಿ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ 84.38 ಮೀ ದೂರವನ್ನು ಎಸೆಯುವಲ್ಲಿ ಸಫಲರಾದರು.

ಹಂಗೇರಿಯ ಬುಡಾಪೆಸ್ಟ್‌ನಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ 2023 ಕ್ಕೆ ಜೆನಾ ಪ್ರಭಾವಶಾಲಿ ಪ್ರದರ್ಶನಗಳನ್ನು ನೀಡಿದ್ದಾರೆ. ಜೆನಾ ವೀಸಾ ನಿರಾಕರಿಸಿದ ನಂತರ ಬುಡಾಪೆಸ್ಟ್‌ಗೆ ಹೋಗುವ ಅವಕಾಶ ವಂಚಿತರಾದರು ಎನ್ನುವಷ್ಟರಲ್ಲಿ ಆ ಭಾರತ ಸರ್ಕಾರದ ಮಧ್ಯಸ್ಥಿಕೆಯ ನಂತರ ಇವರು ಬುಡಾಪೆಸ್ಟ್‌ಗೆ ಪ್ರಯಾಣಿಸಿದರು. ತನಗಿಂತ ಹಿರಿಯನಾಗಿದ್ದರೂ ಕಿಶೋರ್ ಜೆನಾ ತನ್ನ ಆರಾಧ್ಯ ದೈವವೆಂದು ಪರಿಗಣಿಸುವ ನೀರಜ್ ಚೋಪ್ರಾ,ಜೆನಾ ತನ್ನ ವೀಸಾ ಪಡೆಯಲು ಸಹಾಯ ಮಾಡುವಲ್ಲಿ ದೊಡ್ಡ ಪಾತ್ರವನ್ನು ವಹಿಸಿದ್ದಾರೆ ಇದಲ್ಲವೇ ನಿಜವಾದ ಕ್ರೀಡಾ ಪ್ರೋತ್ಸಾಹ. "ನನ್ನ ವೀಸಾ ಸಮಸ್ಯೆಯ ಸಮಯದಲ್ಲಿ ನೀರಜ್ ಭಾಯ್ ನನಗೆ ವೈಯಕ್ತಿಕವಾಗಿ ಸಂದೇಶ ಕಳುಹಿಸಿ,ಚಿಂತಿಸಬೇಡಿ ಎಂದು ಹೇಳಿದಾಗ ನಾನು ಭಾವುಕನಾದೆ"ಎಂದು ಜೆನಾ ಪತ್ರಿಕಾ ಸಂದರ್ಶನವೊಂದರಲ್ಲಿ ತಿಳಿಸಿರುತ್ತಾರೆ.

"ಇದು ಬಿಕ್ಕಟ್ಟಿನ ಕ್ಷಣ ಮತ್ತು ನನ್ನ ವೀಸಾದ ಬಗ್ಗೆ ನಾನು ಉದ್ವಿಗ್ನನಾಗಿದ್ದೆ,ಆದರೆ ಅವರು ನನ್ನೊಂದಿಗೆ ಮಾತನಾಡಿ ಮತ್ತು ನಾನು ತಂಡವನ್ನು ಸೇರುತ್ತೇನೆ ಎಂದು ಭರವಸೆ ನೀಡಿದರು ಎಂದೇಳುವಾಗ ಜೆನಾ ಭಾವುಕರಾಗುತ್ತಾರೆ. ಬುಡಾಪೆಸ್ಟ್‌ನಲ್ಲಿ ನಡೆದ ಈವೆಂಟ್‌ನಲ್ಲಿ 84.77ಮೀಟರ್‌ಗಳನ್ನು ಎಸೆದು, ಮತ್ತೊಂದು ವೈಯಕ್ತಿಕ ಅತ್ಯುತ್ತಮ, ನಂಬಲರ್ಹ ಐದನೇ ಸ್ಥಾನವನ್ನು ಗಳಿಸಿದರು.

ಕಿಶೋರ್ ಜೆನಾ ತಮ್ಮ ಏಷ್ಯನ್ ಗೇಮ್ಸ್ ಚೊಚ್ಚಲ ಪಂದ್ಯದಲ್ಲಿ ಬೆಳ್ಳಿ ಪದಕದೊಂದಿಗೆ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದರು.ನೀರಜ್ ಚೋಪ್ರಾ ನಿರೀಕ್ಷೆಯಂತೆ 88.88 ಮೀ ಎಸೆಯುವ ಮೂಲಕ ಚಿನ್ನದ ಪದಕವನ್ನು ಗೆದ್ದರು,ಜೆನಾ ಅದೇ ಸ್ಪರ್ಧೆಯಲ್ಲಿ ಎರಡು ಬಾರಿ ತನ್ನದೇ ಆದ ವೈಯಕ್ತಿಕ ಶ್ರೇಷ್ಠತೆ ದಾಖಲೆಯನ್ನು ಮುರಿದರು. ಜೆನಾ ತನ್ನ ನಾಲ್ಕನೇ ಪ್ರಯತ್ನದಲ್ಲಿ 87.54 ಮೀಟರ್‌ಗೆ ತನ್ನ ವೈಯಕ್ತಿಕ ಶ್ರೇಷ್ಠತೆಯನ್ನು ಉತ್ತಮಗೊಳಿಸಿದರು. ನೀರಜ್ ಚೋಪ್ರಾ ಅವರ ವೈಯಕ್ತಿಕ ಅತ್ಯುತ್ತಮ 89.94 ಮೀ ಭಾರತೀಯ ರಾಷ್ಟ್ರೀಯ ದಾಖಲೆಯಾಗಿದೆ, ಯಅವರು ಉತ್ತಮ ಎಸೆತಗಳನ್ನು ನಿರ್ವಹಿಸಿದ್ದಾರೆ.

ಕಿಶೋರ್ ಜೆನಾ ಸಾಧನೆಗಳೆಂದರೆ,ಏಷ್ಯನ್ ಗೇಮ್ಸ್ - ಬೆಳ್ಳಿ ಪದಕ (2023),ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗಳು - ಐದನೇ ಸ್ಥಾನ (2023). ವೈಯಕ್ತಿಕ ಅತ್ಯುತ್ತಮ-87.54 ಮೀಟರ್.

ಹೀಗೆ ಬಡತನದ ನಡುವೆ ಬೆಳೆದ ಕ್ರೀಡಾಪಟುವಿಗೆ ಸಹಕರಿಸಿದ ಜಾವೆಲಿನ್ ಎಸೆತದ ಒಲಂಪಿಯನ್ ಚೋಪ್ರಾ ನಿಜಕ್ಕೂ ಗ್ರೇಟ್.

ಇಂದಿನ ಬಹುತೇಕ ಮನಸ್ಸುಗಳು ಕಲುಷಿತಗೊಳಿಸಿಕೊಂಡಿರುವ ಪ್ರಪಂಚದಲ್ಲಿ ತಾವು ಅಭಿವೃದ್ಧಿಗೊಂಡರೆ ಸಾಕು,ತನ್ನ ಸಾಧನೆಗೆ ಅಡ್ಡಗಾಲು ಹಾಕುವವರನ್ನು ಚೀವುಟಿದರೆ ಸಾಕು, ಎಂಬಿತ್ಯಾದಿ ಯೋಚನೆಗಳೊಂದಿಗೆ ಸದಾ ಆಲೋಚಿಸುವ ಸ್ವಾರ್ಥ ಮನಸ್ಸುಗಳು ಹೆಚ್ಚು. ಕ್ಷೇತ್ರಗಳು ಬೇರೆ ಬೇರೆ ಇದ್ದರೂ ಸ್ವಾರ್ಥತೆಯ ಅಂಶ ಒಂದೇ ಎಲ್ಲಾ ಕ್ಷೇತ್ರವು ಈ ವಿಷ ಪಾಶಕ್ಕೆ ಒಳಗಾಗಿದೆ. ಇರುವವರೆಲ್ಲ ಇದೇ ರೀತಿ ಇರುತ್ತಾರೆ ಎಂದು ಹೇಳುವುದು ಕಷ್ಟ ಹಾಗೊಮ್ಮೆ ಹೀಗೊಮ್ಮೆ ಒಳ್ಳೆಯ ಮನಸುಗಳು ದೊರಕುತ್ತವೆ ಅಂತಹವರಲ್ಲಿ ಚೋಪ್ರಾ ಕೂಡ ಒಬ್ಬರು,ಅದಕ್ಕೆ ಹಿರಿಯರು ಹೇಳಿರುವುದು ತುಂಬಿದ ಕೊಡ ತುಳುಕುವುದಿಲ್ಲ ಎಂದು.

ಜಗತ್ತಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಕಾಲು ಎಳೆಯುವವರು ಸಾಕಷ್ಟು ಮಂದಿ ಇದ್ದೇ ಇರುತ್ತಾರೆ ಕಾಲು ಎಳೆಸಿಕೊಳ್ಳುವವನು ಮಾತ್ರ ಜಾಗರೂಕತೆಯಿಂದ ಮುಂದುವರೆಯಬೇಕಾಗುತ್ತದೆ. ಆಶ್ರಯ ಸಿಕ್ಕ ಬಳ್ಳಿ ಹೇಗೆ ಬೆಳೆಯುತ್ತದೆಯೋ ಹಾಗೆ ನಾವು ನಮ್ಮಿಷ್ಟದ ಕ್ಷೇತ್ರದಲ್ಲಿ ಬೆಳೆದು, ಬೆಳೆಸಿದವರಿಗೆ ಕೊನೆಯವರೆಗೂ ಕೃತಜ್ಞರಾಗಿರಬೇಕಾಗುತ್ತದೆ. ಇಲ್ಲಿ ಬಳಸಿಕೊಳ್ಳುವವರು ಹೆಚ್ಚೇ ಹೊರತು ಬೆಳಸುವವರಲ್ಲ...ಇನ್ನಾದರೂನಿಮ್ಮತನವನ್ನುಬದಲಾಯಿಸಿಕೊಳ್ಳಿ,ಬಳಸದೆ ಬೆಳೆಸಿ, ಪೋಷಿಸಿ.ಫಲ ತುಂಬಿದ ಮರ ಬಾಗುವುದೇ ಹೊರತು ಬೀಗುವುದಿಲ್ಲ,ಬಾಗುವ ಭವ್ಯತೆ ಬೆಳೆದವನದಾಗಲಿ, ಬೆಳೆಸಿದವನ ಕೀರ್ತಿ ಭೂಮಂಡಲದಲ್ಲಿ ರಾರಾಜಿಸುವಂತಾಗಲಿ.

## ಅಭಿಮತ

ಸಾ...

ಇದು ಯಾಕೋ ಮೊದಲ ಕಥಾ ಸಂಕಲನ ಅಂತ ನಂಗನ್ನಿಸಲೇ ಇಲ್ಲ ಒಟ್ಟು ನಿಮ್ಮ ಪುಸ್ತಕದಲ್ಲಿರುವ ನಾಕು ಕಥೆಗಳು ಜನ ಸಂಸ್ಕೃತಿ, ಜನರಬದುಕು,ಬದುಕಿನಬದಲಾವಣೆ,ನಗರೀಕರಣದ ಪ್ರಭಾವ ಮುಂತಾದ ಜನ ಕೇಂದ್ರಿತ ವಿಚಾರಗಳನ್ನು ಸಶಕ್ತವಾಗಿ ಕಟ್ಟುವಲ್ಲಿ, ಕಟ್ಟಿಸುಕೊಳ್ಳುವಲ್ಲಿ,ಕಣ್ಣಿಗೆ ಕಟ್ಟುವಂತೆ ಮಾಡುವಲ್ಲಿ ಯಶಸ್ವಿಯಾಗಿವೆ.

ಮೊದಲೆ ಹೇಳಿದಂತೆ ಈ ಎಲ್ಲಾ ಕಥೆಗಳಲ್ಲಿರುವ ಸಮಾನ ಎಳೆಯೆಂದರೆ ಜನ ಕೇಂದ್ರಿತವಾದ ವಿಷಯಗಳು. ಈ ಕಥಾಸಂಕಲನ ಮೊದಲ ಕಥೆಯಲ್ಲಿ ತಂಬಾಕಿನ "ಘಾಟು" ಜೋರಿದೆ. ಇಲ್ಲಿ ಭಾಷೆಯನ್ನು ಬಹಳ ಮಸ್ತಾಗಿ ದುಡಿಸಿಕೊಳ್ಳಲಾಗಿದೆ. ಬಹುತೇಕ ನಮಗೆ ಅಂದರೆ ಬಳ್ಳಾರಿ ದಾವಣಗೆರೆ ಸೀಮೆಯ ತುಂಗಭದ್ರೆಯ ಪಾತ್ರದ ರುಚಿ ಇದ್ದೇ ಇದೆ. ಚೂರು ಬೋರಿಂಗ್ ಅನ್ನಿಸಿದರೂ ಬರಬರುತ್ತಾ ಸ್ಪಷ್ಟವಾಗುತ್ತೆ. ಕೈಗಾರಿಕೀಕರಣದ ಪ್ರಭಾವದಿಂದ ಒಟ್ಟಿಗೆ ಅಣ್ಣ ತಮ್ಮಂದಿರಂತೆ ಹಳ್ಳಿಯಲ್ಲಿ ಬದುಕಿದ ಭಿನ್ನ ಸಮುದಾಯಗಳ ಜನರ ನಡುವೆ ಬಿರುಕು ಹುಟ್ಟುತ್ತದೆ ಎನ್ನುವದು ಮೇಲ್ನೋಟಕ್ಕೆ ಕಂಡರೂ ನಗರೀಕರಣ ಪೂರ್ವದಲ್ಲಿ ಅದರ ಚಹರೆಗಳನ್ನು ಮತ್ತಷ್ಟು ಹಿಡಿಯಬಹುದು ಅನ್ನುವುದನ್ನು ಕಥೆಯೇ ಹಿಡಿದು ಕೊಡುತ್ತದೆ.

ಈ ಕಥೆಯು ಲಾರಿಗಳ ದಟ್ಟಣೆಯಿಂದ ಮುಗಿಯುವುದು ಸದ್ಯದ ರೈತರ ಪರಿಸ್ಥಿತಿಯ ರೂಪಕದಂತಿದೆ. ಇನ್ನು 'ಅಗಸ್ತ್ಯ ನಕ್ಷತ್ರ' ವೆಂಬ ಕತೆ ಓದಿ ಅದೊಂದು ವಿಶಿಷ್ಟ ಅನುಭವ. ಮೊದ ಮೊದಲಿಗೆ ಇದು ಕೂಡ ಗರಗಸದ ಕೊರೆತ ಎನ್ನಿಸುತ್ತದೆ. ಬಹಳಷ್ಟು ವಿವರಣೆ ಇದೆ ಅನ್ನಿಸಿದರೂ ನೀಳ್ಗತೆಗೆ ಅಗತ್ಯ ಅನ್ನಿಸಿತು.

ಒಳಗಡೆ ಸರೋಜಾ ಬೋಜಂಗೌಡರ ನಿರ್ಮಲ ಪ್ರೇಮವಿದೆ. ಲಿಂಗನಗೌಡನ ಗೌಡಕಿಯ ದುರಾಸೆ ಇದೆ. ಜಗದ್ಗುರುವಿನ ಜಾತಿ ರಕ್ಷಣೆಯೇ ಇಲ್ಲಿಯ ಲಿಂಗನಗೌಡನಿಗೆ ಆಯುಧವಾಗುತ್ತೆ. ಅದೆಷ್ಟೋ ಚೋಮರು ಸಿಗುತ್ತಾರೆ. ಇಲ್ಲಿಯೂ ಅವರ ಆಸೆ ಈಡೇರುವುದಿಲ್ಲ. ಜಾತಿಯೆಂಬ ವಿಷ ವರ್ತುಲ ಅದನ್ನು ಆಗಲು ಬಿಡುವುದಿಲ್ಲ . ದೇವರ ಹೆಸರು




ಹೇಳಿ ಕನಸುಗಳನ್ನು ಹೊಸಕಿಹಾಕುತ್ತೆ. ಬೋಜನಗೌಡ ಒಬ್ಬ ವಿಮೋಚಕನಂತೆ ಕಾಣುತ್ತಾನೆ. ಭರಮನಗೌಡ ಊರ ವರ್ತಮಾನಕ್ಕೆಲ್ಲ ಸಾಕ್ಷಿ ಆಗುತ್ತಾನೆ.

ಬಾಬಣ್ಣ ಒಬ್ಬ ರಾಜಕಾರಣಿಯೇ ಆಗಿರುತ್ತಾನೆ. ಕಥೆ ಒಂದು ಹಳೆಯ ಶೈಲಿಯಲ್ಲಿ ಹೆಣೆಸಿಕೊಂಡಿದ್ದರೂ ವಿಭಿನ್ನ ಅನುಭವಗಳನ್ನು ಕಟ್ಟಿಕೊಡುವಲ್ಲಿ ಪಾಸಗಿದೆ. ಇಲ್ಲಿನ ಮುಖ್ಯ ಅಂಶವೆಂದರೆ ಅಲ್ಲೊಂದು ಸಹಜ ಪ್ರತಿರೋಧ ನಡೆಯುತ್ತದೆ ಅದು ತೀರಾ ಸಹಜವೆಂಬಂತೆ ಜರಗುವುದು ಸೋಜಿಗ. ಇದೇ ಈ ಕಥೆಯಲ್ಲಿ ಬಹುತೇಕ ಚೋಮರ ಹೋರಾಟದ ಒಂದು ಮಟ್ಟಿಗಿನ ಪ್ರತಿಫಲವನ್ನು ನೀಡುತ್ತದೆ. ಆದರೆ ಚೋಮ ಎಂದಿಗೂ ತನ್ನ ಸ್ವಂತ ಹೊಲವನ್ನು ಉತ್ತಲೇ ಇಲ್ಲ ಎಂಬ ಮಾತು ಮತ್ತೇ ಮತ್ತೇ ನೆನಪಿಸುತ್ತದೆ.

ಈ ಎಲ್ಲಾ ಕಥೆಗೂ ಟ್ವಿಸ್ಟ್ ಕೊಡುತ್ತಾ ಮತ್ತು ಓದುಗರಿಗೆ ವಿವರಿಸುತ್ತಾ ಹೋಗುವ ಉದಯ್ ಒಬ್ಬ ದಿಟದ ಪತ್ರಕರ್ತ. ಮೈಲೇಶಿಯದ್ದೆ ಎಂದು ಮೇಲ್ನೋಟಕ್ಕೆ ಕಾಣುವ ಕಥೆ 'ಕಣಿವೆ'. ಅದು ಮಾರೆಜ್ಜನ ಕಥೆಯೂ ಆಗುತ್ತದೆ. ಬಹುತೇಕ ರೈತರ ಕನಸೆಂದರೆ ತಾವು ಸತ್ತಾಗ ತಮ್ಮನ್ನು ತಮ್ಮ ಹೊಲದಲ್ಲೇ ಹೂಳಬೇಕೆಂಬುದು. ಮಾರೆಜ್ಜನ ಆ ಕನಸು ಈಡೇರಿದರೂ ಮೈನ್ಸಿನ ಧೂಳಲ್ಲಿ ದೂಳಾಗಿ ಹೋಗುತ್ತದೆ. ಮೈಲೇಶಿಯ ಬದುಕು ಇಲ್ಲಿನ ಬಹುತೇಕ ದಲಿತ ಹುಡುಗರ ಬದುಕು ಅದೇ ಅದೇಯಾಗಿದೆ ಎಂದರೂ ತಪ್ಪಾಗಲಾರದು. ಅರಗಿನಡೋಣಿ, ಕುಡುತಿನಿ ಭಾಗದ ರೈತರು ಸಧ್ಯಕ್ಕೆ ಅನುಭವಿಸುತ್ತಿರುವ ನೋವುಗಳಿಗ್ಹಿಡಿದ ಕನ್ನಡಿಯಂತೆಯೆ ಕಥೆಯೂ ಇದೆ.

ನೀರು ಕೆಳಮುಖವಾಗಿ ಹರಿಯುವುದು ಪ್ರಕೃತಿಯ ನಿಯಮ. ಆದರೆ ಅದನ್ನೇ ಬುಡ ಮೇಲು ಮಾಡಲು ಹೊರಟು ತಮ್ಮ ಮಟ್ಟಿಗೆ ಯಶಸ್ವಿಯಾದದ್ದು ಭಾರತದ ಜಾತಿ ಪದ್ಧತಿ ಮಾತ್ರ .

ಜಾಗತೀಕರಣ ದಲಿತರನ್ನು ಉದ್ಧಾರ ಮಾಡುತ್ತದೆ ಎಂದು ಬರೆದು ಹಿರಿಯ ಕತೆಗಾರರು ಸುಳ್ಳಾದದ್ದು ಗೊತ್ತೇ ಇದೆ. ಇದು "ನಲ್ಲಿ ಬಂತು" ಕಥೆಯಲ್ಲಿನ ವಸ್ತು ಅಷ್ಟೇ ಆಗಿರದೆ ಇಡೀ ವಿಶ್ವವೇ ಒಂದು ಹಳ್ಳಿ ಎನ್ನುವುದು ಬೋಗಸ್ ಎಂಬುದು ಗೊತ್ತಾಗುತ್ತದೆ. ಇದು ಬಹುತೇಕ ಭಾರತದ ಹಳ್ಳಿಗಳ ನೀರಿನ ಗಾತೆಯ ಡಾಕ್ಯುಮೆಂಟ್ರಿ.ಇದು ಭಾರತದ ಬಹುತೇಕ ಹಳ್ಳಿಗಳ ಸಮಸ್ಯೆ. ಮೇಲ್ಜಾತಿಯ ಒಬ್ಬ ವ್ಯಕ್ತಿ ಇಲ್ಲಿ ಮತ್ತೇ ವಿಮೋಚಕ ಹೆಜ್ಜೆ ಇಡುತ್ತಾನೆ. ಶತಾಯ ಗತಾಯ ಪ್ರಯತ್ನದ ನಂತರ ಮಗನ ರೋಗಗ್ರಸ್ತ ಸಾವಿನೊಂದಿಗೆ ಆತನು ಸುಮ್ಮನಾಗುತ್ತಾನೆ.

ಕಥೆಯಲ್ಲಿ ಪಲ್ಟಿಯಾಗಿ ಬಿದ್ದಿರುವ ಬಸ್ಸು ಭಾರತದ ದಲಿತರ ಬದುಕಿನ ರೂಪಕ . ಯಾರೋ ಬೀಳಿಸಿದ್ದನ್ನು ಎತ್ತಲು ಹೋದವರು ದಲಿತರೇ. ವಿಫಲರಾಗಿ ಕುಂತವರು ಅವರೇ.

ನೀರಿಗೆ ಯಾವ ಭೇದವಿಲ್ಲ ಎನ್ನುವುದು ಸತ್ಯ. ಆದರೆ ನೀರಿನ ಸೌಕರ್ಯ ಕೊಡುವವರಿಗೆ ಎಲ್ಲಾ ಭೇದವು ಗೊತ್ತು. ಯಾವ ಯಾವ ಜಾತಿಯವರ ನಲ್ಲಿಯ ನೀರು ಎಷ್ಟೆಷ್ಟು ಘಾಸ್ಟು ಎಂಬುದು ಕತೆಯನ್ನು ಓದಿದಾಗಲೆ ಗೊತ್ತಾಗುವುದು.

ಈ ಕತೆಯ ಒಂದು ವಿಶಿಷ್ಟತೆಯಂದರೆ ಇಡೀ ಕತೆಯನ್ನು ಇಬ್ಬರು ಹುಡುಗರ ಕಣ್ಣುಗಳ ಮೂಲಕ ನೋಡುವುದು. ಇಡೀ ಸಂಕಲನದಲ್ಲಿ ಬಹಳ ಕಾಡುವ ಕತೆ ಇದೆ ಎಂದರೂ ತಪ್ಪಾಗಲಾರದು. ಇಡೀ ಸಂಕಲನದಲ್ಲೆ ಇಲ್ಲಿಯೂ ಜನ ಸಂಸ್ಕೃತಿಗಳ ಅನಾವರಣ ಎಲ್ಲಾ ಕತೆಗಳಿಗಿಂತಲೂ ಜಾಸ್ತಿ ಇದೆ. ಹೌದು ಒಂದು ಕೃತಿ ಕತೆಯೋ, ಕಾದಂಬರಿಯೊ, ಕಾವ್ಯವೋ ಯಾವುದೇ ಪ್ರಕಾರವಾದರೂ ಜನರ ನೋವು, ಜನ ಸಂಸ್ಕೃತಿಯ ಆಯಾಮ ಮತ್ತು ಹೆಚ್ಚೆಚ್ಚು ಜನ ಕೇಂದ್ರಿತ ವಾದಂತಂತೆಲ್ಲ ಹೆಚ್ಚು ಹತ್ತಿರವಾಗುತ್ತದೆ.

ಮೊದಲೆ ಹೇಳಿದಂತೆ ಕೆಲವು ಕಡೆ ವಿವರ ಜಾಸ್ತಿ ಇದ್ದರೂ ಕತೆಗಳು ಬರಬರುತ್ತ ನಿಚ್ಚಳವಾಗುತ್ತವೆ. ಇಡೀ ಸಂಕಲನದಲ್ಲಿ ಕಥ ಒಂದು ವಿಶಿಷ್ಟ ಮತ್ತು ಸಹಜ ರೂಪಕ.

**– ವಿಶಾಲ ಹೊಸಪೇಟೆ**

ಕವಿ ಮನಸು

## ಸುಂದರ ಪಂದ್ಯ



ಎಲೆಗಳ ಜೊತೆಯಲಿ ಹೂಗಳಿಗೀದಿನ
ನಡೆದಿಹ ಚಂದದ ಪಂದ್ಯವಿದು
ಎಲೆಗಳ ಲೆಕ್ಕವ ಮೀರಿಸಿ ಬಿರಿಯುವ
ಹೂಗಳ ಛಲವಿದು ಕಂಡಿಹುದು

ತರುವನು ಮರೆಸಲು ಪಣವನು ತೊಟ್ಟಿವೆ
ಅರಳಿದೆ ಹೂಗಳು ಘಮ ಘಮಿಸಿ
ಸುಂದರವೆನ್ನುವ ಪದವಿದು ಸಾಲದು
ಬಣ್ಣಿಸೆ ಕೊರತೆಯ ಪದವೆನಿಸಿ

ಬಯಲಿನ ನಡುವಲಿ ಮೊಳೆತಿಹ ಗಿಡವಿದು
ಹರಡಿದೆ ಕೊಂಬೆಯ ಸೊಗಸಾಗಿ
ಹಸಿರಿನ ಎಲೆಗಳ ಪರದೆಯಲಿರಿಸಿದೆ
ಗಿಡದಲಿ ತುಂಬಿದ ಹೂವಾಗಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಬೇಗ ಬರುತೀನಿ ಅಂದಾವ

ಬೇಗ ಬರುತೀನಿ ಅಂದಾವ
ಬೇಗೆ ಮುಗಿದರೂ ಬರಲಿಲ್ಲ
ಎಲ್ಲಿ ಮರೆಯಾದ್ಯೋ ಮಾವ
ಇನ್ನೂ ಯಾಕ ಬರಲಿಲ್ಲ

ಮನೆ ಬಿಡುವಾಗಿನ ಅವಸರ
ಹೊಳ್ಳಿ ಬರುವಾಗ ಯಾಕಿಲ್ಲ
ಚಂಜಿಗೆ ಹಾದ್ಯಾಗ ವಾಹನ ಭರಪೂರ
ಚಲುವ ಚಂದಮಾಮ ಯಾಕ ಬರಲಿಲ್ಲ

ಎದುರು ಬರುವ ಗಾಡಿ ಲೈಟ
ಕಣ್ಣ ಕುಕ್ಯಾವ ಏನ
ಇರುಳ ಹುಳ ಕಾಡ್ಯಾವ ಏನ
ಇಷ್ಟೋತ್ತು ಆದರೂ ಬರಬಾರದೇನ

ಮುಂಜಾನಿಗಿ ಮೇಯ ಹೋದ ದನ
ಚಂಜಿಗೆ ಮನೆ ದಾರಿ ಹಿಡೀತಾವ
ದನಕಿರೋ ಬುದ್ಧಿ ನಿನಗಿಲ್ಲವೇನ
ನಿನಗೆಷ್ಟು ಹೇಳ್ಬೇಕು ಬೇಗ ಬರಬಾರದೇನ

ನೂರೆಂಟು ನಂಬರ್,ಸರಕಾರಿ ಗಾಡಿ
ಕುಂಯೋ ಕುಂಯೋ, ಶಬ್ದವ ಮಾಡಿ
ಭರ ಭರನೇ,ಅರ್ಜೆಂಟ್ ಓಡೈತಿ
ಎನ್ನೆದೆಯೊಳಗ ಢವ ಢವ ಮಾಡೈತಿ

ಹೊರಗೆ ಹೋದವರ ಸುದ್ದಿ ದೇವರೇ ಬಲ್ಲ
ಕೆಟ್ಟ ಸುದ್ದಿಯನ ನಾ ಕೇಳಬಾರದಲ್ಲ
ಕಂಡರೆ ಸಾಕವ್ವಾ ಚೆಲುವ ಚೆನ್ನಿಗರಾಯ
ನನ್ನೆಲ್ಲ ಕಷ್ಟ ಕ್ಷಣದಲ್ಲಿ ಮಂಗಮಾಯ

– ಕೆ ಎಂ ಬಸವರಾಜ
ನಿವೃತ್ತ ಇಂಜನೀರ್, ಹೊಸಪೇಟೆ

## ತುಂಗಭದ್ರಾ ನೀರಿನ ಮಟ್ಟ



| ಮಂಗಳವಾರ : 28-11-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1594.12 ಅಡಿ |
| ಒಳ ಹರಿವು | 495 ಕ್ಯುಸೆಕ್ |
| ಹೊರ ಹರಿವು | 6802 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 14.814 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

| ಕಳೆದ ವರ್ಷ ಇದೇ ದಿನ | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.82 ಅಡಿ |
| ಒಳ ಹರಿವು | 2031 ಕ್ಯುಸೆಕ್ |
| ಹೊರ ಹರಿವು | 7387 ಕ್ಯುಸೆಕ್ |
| ಸಾಮರ್ಥ್ಯ | 93.389 ಟಿಎಂಸಿ |

# ದೂರುಗಳು ಬಾರದಂತೆ ಕಾಮಗಾರಿ ನಡೆಸಿ

## ಜಲಜೀವನ ಮಿಷನ್ ಕಾಮಗಾರಿಗಳನ್ನು ಕೊರತೆಯಾಗದಂತೆ ಇರಲಿ । ಸಂಸದ ಕರಡಿ ಸಂಗಣ್ಣ ಹೇಳಿಕೆ

**ಹಂಪಿ ಟೈಮ್ಸ್ ಕೊಪ್ಪಳ**

ಜಲಜೀವನ ಮಿಷನ್ ಕಾಮಗಾರಿಗಳನ್ನು ದೂರುಗಳು ಬಾರದ ಹಾಗೆ ನಡೆಸಬೇಕು ಎಂದು ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿಯ ಅಧ್ಯಕ್ಷರು ಆಗಿರುವ ಸಂಸದರಾದ ಕರಡಿ ಸಂಗಣ್ಣ ಅವರು ಹೇಳಿದರು.

ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ನವೆಂಬರ್ 28ರಂದು ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ಮನೆಮನೆಗೂ ನೀರು ತಲುಪಬೇಕು ಎನ್ನುವ ಬಹುಮುಖ್ಯ ಆಶಯದ ಜೆಜೆಎಂ ಯೋಜನೆಯ ಅನುಷ್ಠಾನದ ಬಗ್ಗೆ ಗಮನ ಹರಿಸಬೇಕಾದ ಅಧಿಕಾರಿಗಳೇ ಕಾಮಗಾರಿ ಕಳಪೆಯಾಗಿದೆ ಎಂದು ಹೇಳುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ ಸಂಸದರು, ಕೆಲಸದ ಬಗ್ಗೆ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳಿಗೆ ತಕ್ಕಪಾಠ ಕಲಿಸಬೇಕು. ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತುಗೊಳಿಸಿದರೆ ಸಾಲದು ಅಂತವರ ಮೇಲೆ ಯಾವುದೇ ಮುಲಾಜಿಲ್ಲದೆ ಎಫ್‌ಐಆರ್ ದಾಖಲಿಸಲು ಕ್ರಮ ವಹಿಸಬೇಕು ಎಂದು ನಿರ್ದೇಶನ ನೀಡಿದರು. ಜಿಲ್ಲೆಯ ಪ್ರತಿಯೊಂದು ಹಳ್ಳಿಗೆ ಪ್ರತಿಯೊಂದು ಮನೆಗೆ ಕುಡಿಯುವ ನೀರು ತಲುಪಬೇಕು ಎಂಬುದಷ್ಟೇ ನಮ್ಮ ಉದ್ದೇಶವಾಗಿದೆ ಎಂದ ಸಂಸದರು, ಜನಹಿತ ಆಶಯದ ಜೆಜೆಎಂ ಕಾಮಗಾರಿ ಕಳಪೆಯಾಗುತ್ತಿದೆ ಎಂಬುದನ್ನು ಸಹಿಸಲಾಗದು. ಜೆಜೆಎಂ ಕಾಮಗಾರಿಯಲ್ಲಿ ಕಳಪೆ ಕೆಲಸ ಮಾಡಿದ ಮತ್ತು ಕಳಪೆ ಸಾಮಗ್ರಿ ಬಳಸಿದ ಗುತ್ತಿಗೆದಾರರ ಮೇಲೆ ಮುಲಾಜಿಲ್ಲದೇ ಕ್ರಮ ಜರುಗಿಸಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಈ ವೇಳೆ ಶಾಸಕರಾದ ದೊಡ್ಡನಗೌಡ ಪಾಟೀಲ ಅವರು ಮಾತನಾಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಾಲೂಕುವಾರು ಭೇಟಿ ನೀಡಿ ಅಧಿಕಾರಿಗಳ ಸಭೆ ನಡೆಸಿ ನಿರಂತರ ಪರಿಶೀಲಿಸುತ್ತಿರುವುದರಿಂದ ಜೆಜೆಎಂ ಕಾಮಗಾರಿ ಕೆಲವು ಕಡೆಗಳಲ್ಲಿ ಅಚ್ಚುಕಟ್ಟಾಗಿ ನಡೆಯುತ್ತಿದೆ ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಮಾತನಾಡಿ, 8 ತಿಂಗಳಿನಿಂದ ಶೇ.45ರಷ್ಟು ಮಾತ್ರ ಕಾಮಗಾರಿಯಲ್ಲಿ ಪ್ರಗತಿಯಾಗಿದೆ ಎಂಬುದು ಕೆಲವು ಕಡೆಗೆ ವರದಿಯಾಗಿದೆ. ಕೆಲವು ಕಡೆಗಳಲ್ಲಿ ಅವೈಜ್ಞಾನಿಕವಾಗಿ ಗಟಾರು ಪಕ್ಕವೇ ಜೆಜೆಎಂ ಪೈಪು ಮತ್ತು ನಲ್ಲಿ ಕೂಡಿಸಲಾಗಿದೆ. ಜೆಜೆಎಂ ಕಾಮಗಾರಿಗಾಗಿ ಸಿಸಿ ರಸ್ತೆಯನ್ನು ಕಿತ್ತಿರುವುದನ್ನು ಕೆಲವೆಡೆ ಇದುವರೆಗೆ ಸರಿಪಡಿಸಿಲ್ಲ. ನಿರಂತರವಾಗಿ ಗುತ್ತಿಗೆದಾರರು ಬದಲಾಗುತ್ತಿರುವುದರಿಂದಲೂ ಈ ಕಾಮಗಾರಿ ಕಳೆಯಾಗಲು ಕಾರಣವಾಗಿದೆ ಎಂದರು.



ಈ ವೇಳೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಮಾತನಾಡಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ, ನಿರ್ಮಿತಿ, ಕೆಆರ್‌ಐಡಿಎಲ್ ಸೇರಿದಂತೆ ಇನ್ನಿತರ ಇಲಾಖೆಗಳು ಸಮನ್ವಯದಿಂದ ಕೆಲಸ ಮಾಡಬೇಕು. ಸರ್ಕಾರಗಳು ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಗಳನ್ವಯ ಕೆಲಸ ನಿರ್ವಹಿಸಬೇಕು. ಯಾವುದೇ ಪ್ರದೇಶದಲ್ಲಿ ಸಿಸಿ ರಸ್ತೆ ನಿರ್ಮಿಸುವ ಮೊದಲು ಅಂತಹ ಕಡೆಗಳಲ್ಲಿ ಕುಡಿಯುವ ನೀರು ಸರಬರಾಜು ಪೈಪ್‌ಲೈನ್ ಅಳವಡಿಕೆ ಆಗಿದೆಯೋ ಇಲ್ಲೋ ಎಂಬುದರ ಬಗ್ಗೆ ಗಮನಹರಿಸಬೇಕು. ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಅಥವಾ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಂದ ನಿರಪೇಕ್ಷಣಾ ಪತ್ರ ಪಡೆದು ಕಾಮಗಾರಿ ನಡೆಸಿದಾಗ ಸಿಸಿ ರಸ್ತೆಯನ್ನು ಕೀಳುವ ಪರಿಸ್ಥಿತಿ ಬರುವುದಿಲ್ಲ. ಇಂತಹ ವಿಷಯಗಳ ಬಗ್ಗೆ ಅಧಿಕಾರಿಗಳು ಗಮನ ಹರಿಸಬೇಕು ಎಂದು ತಿಳಿಸಿದರು.

ಜಿಲ್ಲಾಪಂಚಾಯತ್‌ಮುಖ್ಯಕಾರ್ಯನಿರ್ವಹಣಾಧಿಕಾರಿ ರಾಹುಲ್ ರತ್ನಂ ಪಾಂಡೆಯ ಅವರು ಮಾತನಾಡಿ, ಜೆಜೆಎಂ ಕಾಮಗಾರಿಯು ಎಲ್ಲಾ ಕಡೆಗಳಲ್ಲಿ ಸರಿಯಾಗಿ ನಡೆಯಬೇಕು. ಕಾಲಮಿತಿಯೊಳಗಡೆ ಯೋಜನೆ ಅನುಷ್ಠಾನವಾಗಬೇಕು ಎನ್ನುವ ಉದ್ದೇಶದಿಂದ ಈಗಾಗಲೇ ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಸಂಚರಿಸಿ ಗ್ರಾಮೀಣ ಕುಡಿಯುವ ನೀರು ಮತ್ತು ನೈಮಲ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯನ್ನು ಆಯಾ ವಿಧಾನಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ನಡೆಸಿಸಮಗ್ರಚರ್ಚಿಸಿಸಮಸ್ಯೆಗಳನ್ನುಸರಿಪಡಿಸಲಾಗುತ್ತಿದೆ. ಜೆಜೆಎಂ ಕಾಮಗಾರಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಲ್ಲಿ ಲೋಪ ಎಸಗಿದ ಅಧಿಕಾರಿಗಳಿಗೆ ನೋಟೀಸ್ ನೀಡಿ ಎಚ್ಚರಿಕೆ ನೀಡಲಾಗಿದೆ. ಗುತ್ತಿಗೆದಾರರಿಗೆ ಸಹ ನೊಟೀಸ್ ನೀಡಿ ಅವರಿಂದ ವಿವರಣೆ ಪಡೆದು ಲೋಪ ಎಸಗಿದವರನ್ನು ಕಪ್ಪುಪಟ್ಟಿಗೆ ಸೇರಿಸಿ ಅಂತವರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ ಎಂದು ತಿಳಿಸಿದರು.

ಕಳಪೆ ಕೆಲಸ ನಡೆಸಿದ ಅಧಿಕಾರಿಗಳಿಗೆ ನೋಟಿಸ್ ನೀಡಿ ಎಚ್ಚರಿಕೆ ನೀಡಲಾಗಿದೆ. ಪೈಪು ಜೋಡಿಸಲು ಕಿತ್ತಿರುವ ರಸ್ತೆಯನ್ನು ಸರಿಪಡಿಸದ ಅಧಿಕಾರಿಗಳಿಗೆ ಸಹ ನೋಟಿಸ್ ನೀಡಲಾಗಿದೆ ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಅಭಿಯಂತರರಾದ ವಿಜಯಕುಮಾರ ಅವರು ತಿಳಿಸಿದರು.

ಯಲಬುರ್ಗಾ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರು ಸರಬರಾಜಿನ ಜೆಜೆಎಂ ನಲ್ಲಿಗಳಲ್ಲಿ ಟ್ಯಾಂಕರ್ ನೀರಿನ ಜೊತೆಗೆ ಕುಡಿಯಲು ಅಪ್ರಯೋಜಕವಾದ ಬೋರವೆಲ್ ನೀರು ಬಿಡಲಾಗುತ್ತಿದೆ. ಇದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ ಸದಸ್ಯರಾದ ಶಕುಂತಲಾದೇವಿ ಮಾಲಿಪಾಟೀಲ ಅವರು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಜೆಜೆಎಂ ಕಾಮಗಾರಿ ಆರಂಭವಾಗಿ ಐದು ವರ್ಷ ಮುಗಿಯಲು ಬಂದಿತು. ಕೆಲ ಹಳ್ಳಿಗಳ ಟ್ಯಾಂಕರಗೆ ಇದುವರೆಗೆ ನೀರು ಏರಿಲ್ಲ ಎಂದು ದಿಶಾ ಸಮಿತಿಯ ಮತ್ತೊಬ್ಬ ಸದಸ್ಯರಾದ ಸತ್ಯನಾರಾಯಣರಾವ್ ದೇಶಪಾಂಡೆ ಅವರು ಬೇಸರ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರದ ಮಹತ್ವದ ಯೋಜನೆ ಹರ್ ಘರ್ ಜಲ್ ಯೋಜನೆಯ ಜಲಜೀವನ್ ಮಿಷನ್ ಕಾಮಗಾರಿಗಳು ಇದುವರೆಗೆಯಾವಯಾವಕಡೆಗಳಲ್ಲಿಪರಿಪೂರ್ಣವಾಗಿವೆ ಎಂಬುದರ ಬಗ್ಗೆ ಅಧಿಕಾರಿಗಳಲ್ಲಿ ಸರಿಯಾದ ಮಾಹಿತಿ ಇಲ್ಲ ಎಂದು ಮತ್ತೊಬ್ಬ ಸದಸ್ಯರಾದ ನವೀನ್ ಗುಳಗನ್ನವರ ಅವರು ಅಸಮಧಾನ ವ್ಯಕ್ತಪಡಿಸಿದರು. ಸಭೆಯಲ್ಲಿ ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಕೃಷ್ಣಮೂರ್ತಿ ಪಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

# ಲಿಂಗತ್ವ ಅಲ್ಪಸಂಖ್ಯಾತರಿಗೆ ಪಡಿತರ ಚೀಟಿ ಒದಗಿಸಿ

## ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ । ಜಿಲ್ಲಾ ಮಟ್ಟದ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ವೈಯಕ್ತಿಕ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ಒದಗಿಸುವ ಮೂಲಕ ಸರ್ಕಾರದ ಸೌಲಭ್ಯ ದೊರೆಯುವಂತೆ ಅನುಕೂಲ ಕಲ್ಪಿಸಿ ಎಂದು ಟ್ರಾನ್ಸ್‌ಜೆಂಡರ್‌ರವರ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಉಸ್ತುವಾರಿ ಸಮಿತಿ/ಕೋಶದ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸೋಮವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಟ್ರಾನ್ಸ್‌ಜೆಂಡರ್‌ರವರ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಉಸ್ತುವಾರಿ ಸಮಿತಿ/ಕೋಶದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಲಿಂಗತ್ವ ಅಲ್ಪಸಂಖ್ಯಾತರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಕರ್ನಾಟಕ ರಾಜ್ಯ ಟ್ರಾನ್ಸ್‌ಜೆಂಡರ್ ನೀತಿ–2017 ನ್ನು ಜಾರಿಗೊಳಿಸಲಾಗಿದೆ. ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ಜಿಲ್ಲಾ ಮಟ್ಟದಲ್ಲಿ ಟ್ರಾನ್ಸ್‌ಜೆಂಡರ್‌ರವರ ಶ್ರೇಯೋಭಿವೃದ್ಧಿಗಾಗಿ, ಅವರಿಗೆ ಸಮಾಜದಲ್ಲಿ ಗೌರವಯುತವಾದ ಅಸ್ತಿತ್ವ ಒದಗಿಸಲು ಹಾಗೂ ಸರ್ಕಾರದ ಯೋಜನೆಗಳನ್ನು ಈ ಸಮುದಾಯಕ್ಕೆ ಒದಗಿಸಲು ಅನುಕೂಲವಾಗುವ ನಿಟ್ಟಿನಲ್ಲಿ ಟ್ರಾನ್ಸ್‌ಜೆಂಡರ್‌ರವರ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಉಸ್ತುವಾರಿ ಸಮಿತಿ/ಕೋಶವನ್ನು ಸರ್ಕಾರ ರಚಿಸಿದೆ. ಅದರನ್ವಯ ಜಿಲ್ಲೆಯಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಸರ್ಕಾರದ ಸೌಲಭ್ಯಗಳನ್ನು ಒದಗಿಸುವುದು ಇಲಾಖೆಯ ಜವಾಬ್ದಾರಿಯಾಗಿದೆ. ಆದರೆ ಲಿಂಗ ಪರಿವರ್ತನೆ ನಂತರ ಯಾವುದೇ ಮೂಲ ಹಾಗೂ ಅಗತ್ಯ ಪೂರಕ ದಾಖಲೆಗಳು ಇಲ್ಲದೇ ಇರುವುದರಿಂದ ಲಿಂಗತ್ವ ಅಲ್ಪಸಂಖ್ಯಾತರು ಸರ್ಕಾರದ ಬಹುತೇಕ ಸೌಲಭ್ಯ, ಯೋಜನೆಗಳಿಂದ ವಂಚಿತರಾಗುತ್ತಿದ್ದಾರೆ. ಅಂತಹವರನ್ನು ಗುರುತಿಸಿ ಅವರಿಗೆ ಸರ್ಕಾರದ ಸವಲತ್ತು ಪಡೆಯಲು ಬೇಕಾಗುವ ವೈಯಕ್ತಿಕ ದಾಖಲೆಗಳಾದ ವೈಯಕ್ತಿಕ ಬಿಪಿಎಲ್ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ, ಆಧಾರ್ ಕಾರ್ಡ್, ಟ್ರಾನ್ಸ್‌ಜೆಂಡರ್ ಕಾರ್ಡ್‌ಗಳನ್ನು ಒದಗಿಸಲು ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ ಲಿಂಗತ್ವ ಅಲ್ಪಸಂಖ್ಯಾತರ ಸರ್ವೆ ಕಾರ್ಯ ನಡೆದಿಲ್ಲ. ಈ ಕುರಿತು ಪರಿಶೀಲಿಸಿ ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ನಡೆಸಿ, ಜಿಲ್ಲೆಯಲ್ಲಿ ಇರುವ ಒಟ್ಟು ಲಿಂಗತ್ವ ಅಲ್ಪಸಂಖ್ಯಾತರನ್ನು ಗುರುತಿಸಬೇಕು. ಅವರಿಗೆ ಸರ್ಕಾರದ ಸವಲತ್ತು ಸೇರಿದಂತೆ ಗೌರವಯುತ ಬದುಕು ನಡೆಸುವಂತೆ ಅನುಕೂಲವಾಗುವ ರೀತಿಯಲ್ಲಿ ಇಲಾಖೆಯ ಪರಿಮಿತಿಯೊಳಗೆ ಸಾಧ್ಯವಾಗುವಂತಹ ಎಲ್ಲ ಸಹಾಯವನ್ನು ನೀಡಬೇಕು. ಲಿಂಗತ್ವ ಅಲ್ಪಸಂಖ್ಯಾತರಿಗೆ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ ನೀಡುವುದರಿಂದ ಸರ್ಕಾರದ ಪ್ರಮುಖ ಯೋಜನೆಯಾದ ಗೃಹಲಕ್ಷ್ಮೀ ಯೋಜನೆಗೆ ಒಳಪಡಿಸಬಹುದು. ಇದರಿಂದ ಆರ್ಥಿಕವಾಗಿ ಸಮುದಾಯಕ್ಕೆ ಅನುಕೂಲ ಕಲ್ಪಿಸಿದಂತಾಗುತ್ತದೆ. ಗೃಹಲಕ್ಷ್ಮೀ ಯೋಜನೆಯಲ್ಲಿ ಮಂಗಳಮುಖಿಯರಿಗೂ ಸವಲತ್ತು ದೊರೆಯುವ ಬಗ್ಗೆ ಯೋಜನೆಯ ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಪೋರ್ಟಲ್‌ನಲ್ಲಿ ಮಾಹಿತಿಯನ್ನು ಭರ್ತಿ ಮಾಡುವಾಗ ಆಯ್ಕೆಯ ಕೊರತೆಯಿಂದ ಫಲಾನುಭವಿಗಳು ವಂಚಿತರಾಗುತ್ತಿದ್ದಾರೆ. ಈ ಬಗ್ಗೆ ಕೇಂದ್ರ ಕಚೇರಿಗೆ ಪತ್ರಮುಖೇನ ಸಂಪರ್ಕಿಸಿ, ಪೋರ್ಟಲ್‌ನಲ್ಲಿರುವ ತಾಂತ್ರಿಕ ತೊಂದರೆಗಳನ್ನು ಪರಿಹರಿಸಿ. ವಸತಿ ರಹಿತರಿಗೆ ನಿವೇಶನ, ವಸತಿ ಸೌಲಭ್ಯ ಕಲ್ಪಿಸಿ ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರಿಗೆ ಜಿಲ್ಲಾಡಳಿತದಿಂದ ಒಂದು ದಿನದ ಕಾರ್ಯಾಗಾರವನ್ನು ಏರ್ಪಡಿಸಲಾಗುವುದು. ಈ ಕಾರ್ಯಾಗಾರದಲ್ಲಿ ಸರ್ಕಾರದ ಸವಲತ್ತುಗಳು ಹಾಗೂ ಅವುಗಳನ್ನು ಪಡೆಯುವ ವಿಧಾನಗಳ ಬಗ್ಗೆ ತಿಳಿಸಿಕೊಡಲಾಗುವುದಲ್ಲದೆ, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಟ್ರಾನ್ಸ್‌ಜೆಂಡರ್ ಕಾರ್ಡ್‌ಗಳನ್ನು ಒದಗಿಸಲು ಸ್ಥಳದಲ್ಲಿಯೇ ಕ್ರಮ ವಹಿಸಲಾಗುವುದು. ಇದಕ್ಕಾಗಿ ಸಮುದಾಯದವರು ಒಟ್ಟಾಗಿ ಬಂದರೆ ಅಧಿಕಾರಿಗಳು ಕಾರ್ಯಾಗಾರ ಆಯೋಜಿಸಲು ಅನುಕೂಲವಾಗುತ್ತದೆ ಎಂದು ಸಮುದಾಯದ ಪ್ರತಿನಿಧಿಗಳಿಗೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಂಗಳಮುಖಿಯರು ಭಿಕ್ಷೆ ಬೇಡುವ ಮೂಲಕ ಹಣ ಸಂಗ್ರಹ ಮಾಡುವುದನ್ನು ಬಿಟ್ಟು, ಅವರು ಬಯಸಿದಲ್ಲಿ ಅದೇ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಅಂಗಡಿಗಳನ್ನು ಹಾಕಲು ಅವಕಾಶ ಕಲ್ಪಿಸಿಕೊಡಲಾಗುವುದು. ತೋಟಗಾರಿಕೆ ಇಲಾಖೆಯಿಂದ ಜ್ಯೂಸ್ ಸೆಂಟರ್ ತೆರೆಯಲು ಅವಕಾಶವಿದೆ. ಅದರಂತೆ ರೊಟ್ಟಿ ತಯಾರಿಕೆ, ಹಪ್ಪಳ ತಯಾರಿಕೆ ಯಂತ್ರಗಳನ್ನು ಒದಗಿಸಲಾಗುವುದು. ಇದರಿಂದ ಮಂಗಳಮುಖಿಯರು ಸ್ವಾವಲಂಬಿಯಾಗುವುದರ ಜೊತೆಗೆಘನತೆಯಬದುಕುರೂಪಿಸಿಕೊಳ್ಳಬಹುದು. ಆಸಕ್ತರು ಮಹಿಳಾ ಅಭಿವೃದ್ಧಿ ನಿಗಮವನ್ನು ಅಥವಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಸಂಪರ್ಕಿಸಿ ಸೌಲಭ್ಯ ಪಡೆಯಬಹುದು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಕೊಪ್ಪಳ ಘಟಕದ ಅಭಿವೃದ್ಧಿ ನಿರೀಕ್ಷಕಿ ಪೂರ್ಣಿಮಾ ಮಾತನಾಡಿ, ಜಿಲ್ಲೆಯಲ್ಲಿ ಸರ್ಕಾರದ ವತಿಯಿಂದ ಲಿಂಗತ್ವ ಅಲ್ಪಸಂಖ್ಯಾತರ ಸಮೀಕ್ಷೆ ಇದುವರೆಗೂ ನಡೆದಿಲ್ಲ. ಆದರೆ ಜಿಲ್ಲೆಯಲ್ಲಿ ಸಕ್ರಿಯವಾಗಿರುವ ಹೊಂಗಿರಣ ಸಮಾಜ ಸೇವಾ ಸಮಿತಿ ನಡೆಸಿದ ಸಮೀಕ್ಷೆ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 848 ಲಿಂಗತ್ವ ಅಲ್ಪಸಂಖ್ಯಾತರಿದ್ದಾರೆ. ಇವರಲ್ಲಿ ಒಟ್ಟು 84 ಜನರಿಗೆ ಟ್ರಾನ್ಸ್‌ಜೆಂಡರ್ ಗುರುತಿನ ಚೀಟಿಯನ್ನು ನೀಡಲಾಗಿದೆ. ಮೈತ್ರಿ ಯೋಜನೆಯಡಿ 46 ಫಲಾನುಭವಿಗಳು ಮಾಸಾಶನ ಪಡೆಯುತ್ತಿದ್ದಾರೆ. ನಿವೇಶನ ಮತ್ತು ವಸತಿ ಸೌಲಭ್ಯಕ್ಕಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಗ್ರಾಮೀಣವಾಗಿ 14 ಹಾಗೂ ನಗರದಲ್ಲಿ 10 ಸೇರಿದಂತೆ ಒಟ್ಟು 24 ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು ಮುಂದಿನ ಕ್ರಮಕ್ಕಾಗಿ ಫಲಾನುಭವಿಗಳ ಅರ್ಜಿಗಳನ್ನು ಜಿಲ್ಲಾ ಪಂಚಾಯತಿ ಹಾಗೂ ನಗರಾಭಿವೃದ್ಧಿ ಕೋಶಕ್ಕೆ ಸಲ್ಲಿಸಲಾಗಿದೆ. ಸಂಜೀವಿನಿ ಯೋಜನೆಯಡಿ ಡೇ–ನಲ್ಮ್ ಯೋಜನೆಯಡಿ ಗಂಗಾವತಿ ನಗರದಲ್ಲಿ 2 ಸ್ವ ಸಹಾಯ ಸಂಘಗಳ ರಚನೆ ಮಾಡಲಾಗಿದೆ. ಸೆಲ್ಕೋ ಫೌಂಡೇಶನ್ ಸಹಕಾರದಿಂದ ಸೋಲಾರ್ ಶಕ್ತಿ ಬಳಸಿ ಉತ್ಪಾದನಾ ಘಟಕ ಸ್ಥಾಪನೆ ಮತ್ತು ತರಬೇತಿಯನ್ನು ಒದಗಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ತಿಪ್ಪಣ್ಣ ಶಿರಸಗಿ, ಜಿಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ ಕೊಟಗಾರ, ಯುನಿಸೆಫ್‌ನ ಹರೀಶ್ ಜೋಗಿ ಸೇರಿದಂತೆ ವಿವಿಧ ತಾಲ್ಲೂಕುಗಳ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ನಿಲೋಫರ್ ರಾಂಪುರಿ, ಸದಸ್ಯರಾದ ಸರೋಜಾ ಬಾಕಳೆ, ನೇತ್ರಾ ಬಸವರಾಜ ಪಾಟೀಲ್, ಕೊಪ್ಪಳ ಅಕ್ಕಮಹಾದೇವಿ ಮಹಿಳಾ ಮಂಡಳಿ ಅಧ್ಯಕ್ಷರು, ಇನ್ನರ್‌ವೀಲ್ ಸದಸ್ಯರಾದ ಶರಣಮ್ಮ ಪಾಟೀಲ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿರಿದ್ದರು.

# ವಸತಿ ರಹಿತರ ಕ್ಷಿಪ್ರ ಸಮೀಕ್ಷೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ರಾಯಚೂರು**

ಸಿರವಾರ ಪಟ್ಟಣ ಪಂಚಾಯತಿಯಿಂದ ಡೇ–ನಲ್ಮ್ ಯೋಜನೆಯಡಿಯಲ್ಲಿ ನಗರ ವಸತಿ ರಹಿತರಿಗೆ, ಆಶ್ರಯ ಉಪಯೋಜನೆಯಡಿ ಅರ್ಹ 3ನೇ ವ್ಯಕ್ತಿ/ಸಂಸ್ಥೆ ಮೂಲಕ ಸಿರವಾರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ವಸತಿ ರಹಿತ ಕ್ಷಿಪ್ರ ಸಮೀಕ್ಷೆ ಕೈಗೊಳ್ಳಬೇಕಾಗಿರುತ್ತದೆ. ಆದ ಕಾರಣ ನಗರ ವಸತಿ ರಹಿತರನ್ನು ಗುರುತಿಸುವ ಕುರಿತು ಸ್ಥಳೀಯ ಎನ್.ಜಿ.ಓ/ 3ನೇ ವ್ಯಕ್ತಿಗಳಿಂದ ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ ಎಂದು ಸಿರವಾರ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ಪ್ರಸ್ತಾವನೆ ಸಲ್ಲಿಸಲು ಆಸಕ್ತ ಮೂರನೇ ವ್ಯಕ್ತಿ ಅಥವಾ ಸಂಸ್ಥೆಗಳು ದರ್ಪಣ ಪೋರ್ಟಲ್‌ನಲ್ಲಿ ನೊಂದಣಿ ಆಗಿರಬೇಕು(ಪ್ರತಿಯನ್ನು ಲಗತ್ತಿಸಬೇಕು), ಸಮರ್ಪಕ ಮಾನವ ಸಂಪನ್ಮೂಲ ಹೊಂದಿರಬೇಕು. ವಿಷಯದಲ್ಲಿ ಜ್ಞಾನ ಸಮರ್ಪಕ ಸಾಧನಗಳನ್ನು ಹೊಂದಿರಬೇಕು. ಹೆಲ್ಪ್‌ಲೈನ್ ಸಹಾಯವಾಣಿ ಹೊಂದಿದವರಿಗೆ ಪ್ರಾಧಿನ್ಯತೆ ನೀಡಲಾಗುವುದು. ವಿಷಯದಲ್ಲಿ ಅನುಭವ ಇರುವವರಿಗೆ ಆಧ್ಯತೆ ಇರುತ್ತದೆ. ಸಮೀಕ್ಷೆಯ ಕಾಲಾವದಿ, ವಿಧಾನ ಇತ್ಯಾದಿ ವಿಷಗಳು ನಿಯಮಾನುಸಾರ ಒಡಂಬಡಿಕೆ ಮಾಡಿಕೊಂಡು ಅದರಂತೆ ಪಾಲಿಸತಕ್ಕದ್ದು, ಇತರೆ ಅವಶ್ಯಕತೆಗಳನ್ನು ಪುರಸಭೆ ನಿರ್ದೇಶನದಂತೆ ಪ್ರಸ್ತಾವನೆಯನ್ನು ಸಲ್ಲಿಸಲು ಡಿ.02ರ ಮದ್ಯಾಹ್ನ 4 ಗಂಟೆ ಕೊನೆಯ ದಿನವಾಗಿರುತ್ತದೆ ಎಂದು ಸಿರವಾರ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

# ಪ್ರತಿಭಾ ಕಾರಂಜಿ ಉತ್ತಮ ವೇದಿಕೆ

**ಮೊದಲ ಪುಟದಿಂದ**

ಕಾರಂಜಿಯಲ್ಲಿ ಆಯ್ಕೆಯಾದ ಪ್ರತಿಭೆಗಳು ರಾಜ್ಯಮಟ್ಟದಲ್ಲಿ ನಡೆಯುವ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ 2022–23ನೇ ಸಾಲಿನ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ರಸಪ್ರಶ್ನೆ ವಿಭಾಗ, ಜಾನಪದ ನೃತ್ಯ ವಿಭಾಗ, ರಂಗೋಲಿ ಸ್ಪರ್ಧೆ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ಶಾಲಾ ಶಿಕ್ಷಕರನ್ನು ಸನ್ಮಾನಿಸಲಾಯಿತು.

ರಸಪ್ರಶ್ನೆ ಸ್ಪರ್ಧೆ ವಿಭಾಗ: ಮಾರೆಮ್ಮ, ಎಸ್ ಇ ಎಸ್ ಶಾಲೆ, ಸಂಡೂರು. ಜಾನಪದ ನೃತ್ಯ ವಿಭಾಗ: ಬಳ್ಳಾರಿ ಬೆಸ್ಟ್ ಶಾಲೆಯ ವಿದ್ಯಾರ್ಥಿಗಳು. ರಂಗೋಲಿ ಸ್ಪರ್ಧೆ: ಸಿರುಗುಪ್ಪ ತಾಲ್ಲೂಕಿನ ಹಚ್ಚೊಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ. ಈ ಸಂದರ್ಭದಲ್ಲಿ ಸಂತ ಜಾನರ ವಿದ್ಯಾಸಂಸ್ಥೆಯ ವ್ಯವಸ್ಥಾಪಕರು ಹಾಗೂ ಪತ್ರ ವ್ಯವಹಾರಾಧಿಕಾರಿಗಳಾದ ವಂದನೀಯ ಫಾದರ್ ವಾಲ್ಟೇರ್ ಮೆನೆಜೆಸ್, ಸಂತಜಾನರ ಪ್ರೌಢಶಾಲೆಯ ಮುಖ್ಯಗುರುಗಳಾದ ಶಾಂತುಶೀಲನ್ ಸೇರಿದಂತೆ ಶಿಕ್ಷಣಾಧಿಕಾರಿಗಳು, ಜಿಲ್ಲಾ ಉಪ ಯೋಜನಾ ಸಮನ್ವಯಾಧಿಕಾರಿಗಳು, ಡಯಟ್ ಉಪನ್ಯಾಸಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಕರು, ವಿಷಯ ಪರಿವೀಕ್ಷಕರು ಸೇರಿದಂತೆ ಜಿಲ್ಲಾ ಹಾಗೂ ಮಟ್ಟದ ಸರ್ಕಾರಿ, ಅನುದಾನ ರಹಿತ ಶಾಲೆಗಳ ಮುಖ್ಯ ಗುರುಗಳು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತಿತರರು ಉಪಸ್ಥಿತರಿರದ್ದರು.

# ವೈಯಕ್ತಿಯ ಕಾರ್ಯಕ್ರಮದಡಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ರಾಯಚೂರು**

2023–24ನೇ ಸಾಲಿನ ಪುರಸಭೆ ನಿಧಿ ಹಾಗೂ ಎಸ್.ಎಫ್.ಸಿ, ಶೇ7.25 ವೈಯಕ್ತಿಕ ಕಲ್ಯಾಣ ಕಾರ್ಯಕ್ರಮದ ವಿವಿಧ ಹಂತದಲ್ಲಿ ವ್ಯಾಸಂಗ ಮಾಡುತ್ತಿರುವ ಇತರೆ ಹಿಂದುಳಿದ ವರ್ಗಗಳ ವಿಧ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಆಸಕ್ತರು ಡಿ.13ರಂದು ಸಂಜೆ 5.30ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೋರಿದೆ. ಅವಧಿ ಮೀರಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹೆಚ್ಚಿನ ಮಾಹಿತಿಗಾಗಿ ಹಾಗೂ ಷರತ್ತುಗಳಿಗಾಗಿ ಕಛೇರಿ ಸಮಯದಲ್ಲಿ ನೋಟಿಸ್ ಬೋರ್ಡನಲ್ಲಿ ನೊಡಬಹುದು ಅಥವಾ ಕಛೇರಿ ವೆಬ್ ಸೈಟ್ www.maskitown.mrc.gov.in. ನಲ್ಲಿ ನೋಡಬಹುದು ಎಂದು ಮಸ್ಕಿ ಪುರಸಭೆಯ ಮುಖ್ಯಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಂಪಿ ಟೈಮ್ಸ್
HAMPI TIMES




ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ಆರು ತಿಂಗಳಲ್ಲಿ ಶೇ.96 ರಷ್ಟು ಪ್ರಗತಿ

## ವಿಜಯನಗರ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮಾಹಿತಿ । ಸಕಾಲ ಸೇವೆಯಲ್ಲಿ ವಿಜಯನಗರ ಜಿಲ್ಲೆ ರಾಜ್ಯಕ್ಕೆ 5ನೇ ಸ್ಥಾನ

**ಹಂಪಿ ಟೈಮ್ಸ್ ಹೊಸಪೇಟೆ:**
ಅಟಲ ಜೀ ಜನಸೇವಾ ಕೇಂದ್ರ ಯೋಜನೆಯಡಿ ಕಳೆದ ಆರು ತಿಂಗಳಲ್ಲಿ 3,69,642 ಅರ್ಜಿಗಳು ಸ್ವೀಕೃಗೊಂಡಿದ್ದು, ಈ ಪೈಕಿ 3,54,965 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಪ್ರತಿ ಶತಃ 96% ರಷ್ಟು ಜಿಲ್ಲೆಯ ಜನರಿಗೆ ಸಕಾಲ ಸೇವೆ ಒದಗಿಸುವಲ್ಲಿ ಪ್ರಗತಿ ಸಾಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

ಸಕಾಲ ತಂತ್ರಾಂಶದಡಿಯಲ್ಲಿ ಕಂದಾಯ ಇಲಾಖೆಯು ನವೆಂಬರ್ ತಿಂಗಳಲ್ಲಿ ರಾಜ್ಯ ಮಟ್ಟದಲ್ಲಿ ಸಕಾಲ ಸೇವೆ ಒದಗಿಸುವಲ್ಲಿ 5ನೇ ಶ್ರೇಯಂಕಗಳಿಸಿದ್ದು, ಅರ್ಜಿಗಳ ವಿಲೇವಾರಿ ಗೊಳಿಸುವಲ್ಲಿ ಶೇಖಡ 97.77% ರಷ್ಟು ಪ್ರಗತಿ ಸಾಧಿಸಲಾಗಿದೆ. ಇ-ಆಡಳಿತ (ಇ-ಆಫೀಸ್) ಗೆ ಸಂಬಂಧಿಸಿದಂತೆ, ಜಿಲ್ಲೆಯ ಎಲ್ಲಾ ಸಹಾಯಕ ಆಯುಕ್ತರ ಕಛೇರಿ, ತಾಲ್ಲೂಕು ಕಛೇರಿ ಹಾಗೂ ನಾಡಕಛೇರಿಗಳಲ್ಲಿ ಇದಲ್ಲದೇ ಜಿಲ್ಲೆಯ ಎಲ್ಲಾ ಭೂ ದಾಖಲೆಗಳ ಕಚೇರಿಯಲ್ಲಿಯು ಸಹ ಇ-ಆಡಳಿತ ಸಂಪೂರ್ಣವಾಗಿ ಆರಂಭಿಸಲಾಗಿರುತ್ತದೆ.

ಕಳೆದ 6 ತಿಂಗಳಲ್ಲಿ ಜಿಲ್ಲೆಯಲ್ಲಿ ಸಾರ್ವಜನಿಕರಿಂದ/ಕಛೇರಿಗಳಿಂದ ಸಲ್ಲಿಸುವ ಎಲ್ಲಾ ಅರ್ಜಿಗಳನ್ನು ಇ-ಆಫೀಸ್ ನಲ್ಲಿ ಸ್ವೀಕರಿಸಲಾಗಿದ್ದು, ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಸಹ ಇ-ಆಡಳಿತವನ್ನು ಸಂಪೂರ್ಣವಾಗಿ ಆರಂಭಿಸಲು ಕ್ರಮವಹಿಸುವಂತೆ ಜಿಲ್ಲಾ ಮಟ್ಟದ ಸಭೆಯನ್ನು ನಡೆಸಿ, ಸಂಬಂಧಿಸಿದ ಇಲಾಖಾ ಮುಖಸ್ಥರಿಗೆ ನಿರ್ದೇಶನ ನೀಡಲಾಗಿರುತ್ತದೆ. ಇದರಿಂದ, ಸಾರ್ವಜನಿಕರಿಗೆ ಸರಳ, ನೈತಿಕ, ಸ್ಪಂದಿಸುವ ಮತ್ತು ಪಾರದರ್ಶಕ ಆಡಳಿತ ಒದಗಿಸುವಲ್ಲಿ ಅನುಕೂಲ ಮಾಡಿಕೊಡಲಾಗಿದೆ.

ಕಂದಾಯ ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದಂತೆ, ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಕಳೆದ 6 ತಿಂಗಳಿಂದ 182 ಮೇಲ್ಮನವಿ ಪ್ರಕರಣಗಳು ಸ್ವೀಕೃತವಾಗಿದ್ದು, ಈ ಪೈಕಿ 150 ಪ್ರಕರಣಗಳನ್ನು ಜುಲೈ-05, ಆಗಸ್ಟ್-20, ಸೆಪ್ಟೆಂಬರ್-29, ಅಕ್ಟೋಬರ್-57 ಮತ್ತು ನವೆಂಬರ್-39 ಪ್ರಕರಣಗಳನ್ನು ವಿಲೇವಾರಿಗೊಳಿಸಲಾಗಿರುತ್ತದೆ. ಉಳಿದಂತೆ ಜಿಲ್ಲೆಯ 2 ಉಪವಿಭಾಗಾಧಿಕಾರಿಗಳ ನ್ಯಾಯಾಲಗಳಲ್ಲಿ 819 ಮೇಲ್ಮನವಿ ಪ್ರಕಣರಗಳು ಸ್ವೀಕೃತವಾಗಿದ್ದು, ಈ ಪೈಕಿ 458



**ಆರು ತಿಂಗಳಲ್ಲಿನ ಪ್ರಗತಿ ನೋಟ**
- ಶೇ. 96% ಸಕಾಲದಲ್ಲಿ ಜನರಿಗೆ ಸೇವೆ
- ಶೇ.97.77 ಸಕಾಲ ಅರ್ಜಿ ವಿಲೇವಾರಿ
- 182 ರಲ್ಲಿ 154 ಪ್ರಕರಣಗಳು ವಿಲೇವಾರಿ
- 819 ಮೇಲ್ಮನವಿ ಪೈಕಿ 458 ವಿಲೇವಾರಿ
- 2 ವರ್ಷಕ್ಕಿಂತ ಮೇಲ್ಪಟ್ಟ ಪ್ರಕರಣ ಇತ್ಯರ್ಥ
- 10818 ಪಿಂಚಣಿ ಪ್ರಕರಣಗಳ ಪೈಕಿ 10773 ವಿಲೇವಾರಿ ಶೇ.99.60 ಪ್ರಗತಿ

ಪ್ರಕರಣಗಳನ್ನು ವಿಲೇವಾರಿಗೊಳಿಸಲಾಗಿದೆ. ಮುಂದುವರೆದು, ಜಿಲ್ಲೆಯ ತಹಶೀಲ್ದಾರರ ನ್ಯಾಯಾಲಯಗಳಲ್ಲಿ ಕಳೆದ 6 ತಿಂಗಳಿಂದ 1350 ಮೇಲ್ಮನವಿ ಪ್ರಕರಣಗಳ ಸ್ವೀಕೃತವಾಗಿದ್ದು, ಈ ಪೈಕಿ 1003 ಪ್ರಕರಣಗಳನ್ನು ವಿಲೇವಾರಿಗೊಳಿಸಲಾಗಿದ್ದು, ಇದರಲ್ಲಿ 02 ವರ್ಷಗಳಿಗಿಂತ ಮೇಲ್ಪಟ್ಟ ಪ್ರಕರಣಗಳನ್ನು ಸಂಪೂರ್ಣವಾಗಿ ಇತ್ಯರ್ಥ ಗೊಳಿಸಲಾಗಿರುತ್ತದೆ. ಇದರಿಂದ ನಾಗರಿಕರಿಗೆ ವ್ಯಾಜ್ಯ ಪ್ರಕರಣಗಳು ಶೀಘ್ರವಾಗಿ ಇತ್ಯರ್ಥಗೊಳ್ಳುವುಲ್ಲಿ ಅನುಕೂಲಕರವಾಗಿದೆ.

ಹೊಸ ಕಂದಾಯ ಗ್ರಾಮಗಳ ರಚನೆಗೆ ಸಂಬಂಧಿಸಿದಂತೆ, ಕಳೆದ 6 ತಿಂಗಳಿಂದ ಜಿಲ್ಲೆಯಲ್ಲಿ 241 ಅರ್ಹ ದಾಖಲೆ ರಹಿತ ಜನವಸತಿ ಪ್ರದೇಶಗಳಿದ್ದು, ಈ ಪೈಕಿ ಖಾಸಗಿ/ಸರ್ಕಾರಿ+ಖಾಸಗಿ ಜಮೀನಿನಲ್ಲಿ ನೆಲೆಗೊಂಡಿರುವ 33 ಗ್ರಾಮಗಳಿಗೆ 01 ತಿಂಗಳಲ್ಲಿ 2ಇ ಅಧಿಸೂಚನೆ ಹೊರಡಿಸಲಾಗಿರುತ್ತದೆ. 28 ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಮುಂದುವರೆದು, ಜಿಲ್ಲೆಯಲ್ಲಿ 58 ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಇವುಗಳನ್ನು ಕಂದಾಯ ಹಾಗೂ ಭೂ ದಾಖಲೆಗಳಲ್ಲಿ ಇಂಡೀಕರಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ. ಇದರಿಂದ ದಾಖಲೆ ರಹಿತ ಪ್ರದೇಶಗಳಿಗೆ ದಾಖಲೆಗಳನ್ನು ಒದಗಿಸಲು ಅನೂಕಲಕರವಾಗಿರುತ್ತದೆ.

ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಯಡಿ ವಿಜಯನಗರ ಜಿಲ್ಲೆಯಲ್ಲಿ ಕಳೆದ 6 ತಿಂಗಳಲ್ಲಿ ಪಿಂಚಣಿದಾರರ ಆಧಾರ್ ಮತ್ತು ಬ್ಯಾಂಕ್ ಖಾತೆಯ ಅನುಸಂದಾನಕ್ಕೆ ಸಂಬಂಧಿಸಿದಂತೆ, (NPCI) 10,818 ಪ್ರಕರಣಗಳು ಬಾಕಿ ಇದ್ದು , ಕಳೆದ 4 ತಿಂಗಳಲ್ಲಿ 10,773 ಪ್ರಕರಣಗಳನ್ನು ಆಧಾರ್ ಮತ್ತು ಬ್ಯಾಂಕ್ ಖಾತೆಯ ಅನುಸಂದಾನ (NPCI) ಮಾಡಲಾಗಿರುತ್ತದೆ. ಜಿಲ್ಲೆಯಲ್ಲಿ (NPCI) ಪ್ರಕರಣಗಳ ವಿಲೇವಾರಿಗೆ ಸಂಬಂಧಿಸಿದಂತೆ, ಶೇ. 99.60% ರಷ್ಟು ಉತ್ತಮ ಪ್ರಗತಿ ಸಾಧಿಸಲಾಗಿರುತ್ತದೆ. ಇದರಿಂದ ಜಿಲ್ಲೆಯ ಪಿಂಚಣಿದಾರರಿಗೆ ರಾಜ್ಯ ಸರ್ಕಾರದಿಂದ ನೀಡಲಾಗುವ ಪಿಂಚಣಿಯನ್ನು ನೇರವಾಗಿ ಪಿಂಚಣಿದಾರರ ಖಾತೆಗೆ ಪಾವತಿ ಮಾಡಲು ಅನುವು ಮಾಡಿಕೊಡಲಾಗಿದೆ ಎಂದು ತಿಳಿಸಿದ್ದಾರೆ.

## ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ ಡಿ.01, 02ರಂದು

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾ ಪೊಲೀಸ್ ಇಲಾಖೆಯ ವಾರ್ಷಿಕ ಕ್ರೀಡಾಕೂಟಗಳು ಡಿ.01 ಮತ್ತು 02 ರಂದು ನಗರದ ಡಿಎಆರ್ ಪೊಲೀಸ್ ಕವಾಯತು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಅವರು ತಿಳಿಸಿದ್ದಾರೆ.
ವಾರ್ಷಿಕ ಕ್ರೀಡಾಕೂಟಗಳ ಉದ್ಘಾಟನಾ ಸಮಾರಂಭ ಡಿ.01ರಂದು ಬೆಳಿಗ್ಗೆ 08 ಗಂಟೆಗೆ ನಡೆಯಲಿದ್ದು, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಉದ್ಘಾಟನೆ ಮಾಡುವರು.
ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಭಾಗವಹಿಸುವರು.
ವಾರ್ಷಿಕ ಕ್ರೀಡಾಕೂಟಗಳ ಸಮಾರೋಪ ಸಮಾರಂಭ ಡಿ.02ರಂದು ಸಂಜೆ 04.30ಕ್ಕೆ ನಡೆಯಲಿದ್ದು, ಮುಖ್ಯ ಅತಿಥಿಗಳಾಗಿ ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರ್ ಹಾಗೂ ಬಳ್ಳಾರಿ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಹೆಚ್ ಸೂರ್ಯವಂಶಿ ಅವರು ಭಾಗವಹಿಸುವರು.
ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಕೆ.ಪಿ.ರವಿಕುಮಾರ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿರುವರು ಎಂದು ತಿಳಿಸಿದ್ದಾರೆ.

## ಸಂತ ಶ್ರೇಷ್ಠ ಕವಿ ಭಕ್ತ ಕನಕದಾಸ ಜಯಂತಿ ನ.30ರಂದು

**ಹಂಪಿ ಟೈಮ್ಸ್ ಬಳ್ಳಾರಿ**
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಸಂತ ಶ್ರೇಷ್ಠ ಕವಿ ಭಕ್ತ ಕನಕದಾಸ ಜಯಂತ್ಯೋತ್ಸವ ಕಾರ್ಯಕ್ರಮವನ್ನು ನ.30 ರಂದು ಬೆಳಿಗ್ಗೆ 12ಕ್ಕೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ರಾಘವ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ.
ಯುವಜನ ಸಬಲೀಕರಣ, ಕ್ರೀಡಾ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು, ನ.30ರಂದು ಬೆಳಿಗ್ಗೆ 9ಕ್ಕೆ ನಗರದ ಅಗ್ನಿಶಾಮಕ ದಳ ಕಚೇರಿಯ ಕನಕದಾಸ ವೃತ್ತ ಬಳಿಯ ಭಕ್ತ ಕನಕದಾಸ ರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಮೆರವಣಿಗೆಗೆ ಚಾಲನೆ ನೀಡುವರು. ನಂತರ ಬೆಳಿಗ್ಗೆ 12ಕ್ಕೆ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸುವರು.
ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು. ಮಹಾನಗರ ಪಾಲಿಕೆಯ ಉಪಮಹಾಪೌರೆ ಬಿ.ಜಾನಕಿ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.
ಕನ್ನಡ ಅಧ್ಯಾಪಕ ಬಿ.ಎರ್ರಿಸ್ವಾಮಿ ಅವರು ವಿಶೇಷ ಜಯಂತಿಯ ಕುರಿತು ವಿಶೇಷ ಉಪನ್ಯಾಸ ನೀಡುವರು.
ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರು, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ, ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್ ಸಾಬ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಹೊನ್ನೂರಪ್ಪಟಿ ಅವರು ಉಪಸ್ಥಿತರಿರಲಿದ್ದಾರೆ.
ಮೆರವಣಿಗೆ ಮಾರ್ಗ: ಕನಕದಾಸ ವೃತ್ತದಿಂದ ರಾಘವ ಕಲಾಮಂದಿರದವರೆಗೆ ನಡೆಯಲಿದೆ.

# ಹಾಸ್ಟೆಲ್ ಬಾಲಕಿಯರಿಗೆ ಅಗತ್ಯ ಮೂಲ ಸೌಲಭ್ಯ ಒದಗಿಸಿ



**ಹಂಪಿ ಟೈಮ್ಸ್ ಕೊಪ್ಪಳ**
ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಬರುವ ಬಾಲಕಿಯರ ವಸತಿ ನಿಲಯಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆ ಇದೆ. ಅದನ್ನು ಸರಿಪಡಿಸಿ ಬಾಲಕಿಯರಿಗೆ ಅನುಕೂಲ ಕಲ್ಪಿಸಿಕೊಡಿ ಎಂದು ಸಂಸದರು ಹಾಗೂ ದಿಶಾ ಸಮಿತಿ ಅಧ್ಯಕ್ಷರಾದ ಸಂಗಣ್ಣ ಕರಡಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.
ಮಂಗಳವಾರದಂದು ಜಿಲ್ಲಾ ಪಂಚಾಯತ್‌ನ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.
ವಿವಿಧ ಇಲಾಖೆಗಳಡಿ ಬರುವ ವಿದ್ಯಾರ್ಥಿ ವಸತಿ ನಿಲಯಗಳಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿದ್ದು, ಅದಕ್ಕೆ ತಕ್ಕ ಹಾಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಲ್ಲ. ಇದರಿಂದ ವಿದ್ಯಾರ್ಥಿಗಳ ವಸತಿ ಹಾಗೂ ವಿದ್ಯಾಭ್ಯಾಸಕ್ಕೆ ಅಡಚಣೆ ಆಗುತ್ತಿದೆ. ಆದ್ದರಿಂದ ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.
ವಿದ್ಯಾರ್ಥಿಗಳ ವಸತಿ ನಿಲಯಕ್ಕೆ ಸಂಬಂಧಿಸಿದಂತೆ ಮಾತನಾಡಿದ ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು, ಸಮಾಜ ಕಲ್ಯಾಣ ಇಲಾಖೆ ಅಡಿ ಬರುವ ನಗರದ ಬಾಲಕಿಯರ ವಸತಿ ನಿಲಯದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ವಸತಿ ನಿಲಯದ ನಿಲಯ ಪಾಲಕರು ವಿದ್ಯಾರ್ಥಿಗಳ ಪರೀಕ್ಷೆಗಳಿದ್ದರೂ ಪರಿಗಣಿಸದೇ ಒತ್ತಾಯಪೂರ್ವಕವಾಗಿ ವಸತಿ ನಿಲಯದಿಂದ ಊರಿಗೆ ಕಳುಹಿಸಿರುವ ಕುರಿತು ವಿದ್ಯಾರ್ಥಿನಿಯರು ದೂರು ನೀಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಸೂಕ್ತ ವಿಚಾರಣೆ ನಡೆಸಿ ತಪ್ಪಿಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ಪರೀಕ್ಷೆ ಇದ್ದಾಗ್ಯೂ ಹಬ್ಬದ ಪ್ರಯುಕ್ತ ವಸತಿ ನಿಲಯಕ್ಕೆ ರಜೆ ಘೋಷಿಸುವ ಕುರಿತು ಸರ್ಕಾರದ ಯಾವುದೇ ಆದೇಶ, ಮಾರ್ಗಸೂಚಿ ಇಲ್ಲದಿದ್ದರೂ ನಿಲಯ ಪಾಲಕರು ಈ ರೀತಿ ವರ್ತಿಸಿರುವುದು ವಿಷಾದನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಬಾಲಕಿಯರ ವಸತಿ ನಿಲಯದಲ್ಲಿ ಸರ್ಕಾರದಿಂದ ನೀಡಬೇಕಾದ ಸ್ಯಾನಿಟರಿ ಪ್ಯಾಡ್‌ಗಳನ್ನು ಸಹ ಕಳೆದ ಹಲವು ತಿಂಗಳುಗಳಿಂದ ನೀಡುತ್ತಿಲ್ಲ. ಸ್ನಾನಕ್ಕೆ ಬಿಸಿ ನೀರಿನ ವ್ಯವಸ್ಥೆ ಇಲ್ಲ. ಅಡುಗೆಯವರು ಮನೆಗೆ ಹೋಗುವ ಅವಸರಕ್ಕೆ ವಿದ್ಯಾರ್ಥಿಗಳು ಸಂಜೆ 06 ಗಂಟೆಗೆ ಊಟ ಮಾಡಬೇಕು ಎಂದು ಒತ್ತಾಯ ಮಾಡುತ್ತಾರೆ ಎಂದು ವಿದ್ಯಾರ್ಥಿನಿಯರು ಬಹಳಷ್ಟು ದೂರುಗಳನ್ನು ನೀಡಿದ್ದಾರೆ. ಈ ಕುರಿತಂತೆ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.
ಇದಕ್ಕೆ ಸಂಬಂಧಿಸಿದಂತೆ ಮಾತನಾಡಿದ ಜಿಲ್ಲಾಧಿಕಾರಿ ನಲಿನ್ ಅತುಲ್ ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಉಲ್ಲೇಖಿತ ವಸತಿ ನಿಲಯಗಳಿಗೆ ಭೇಟಿ ನೀಡಿ, ಅಲ್ಲಿನ ಸಮಸ್ಯೆಗಳನ್ನು ಬಗೆಹರಿಸಿ, ವಿದ್ಯಾರ್ಥಿನಿಯರಿಗೆ ಮೂಲಭೂತ ಸೌಕರ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.
ಕುಷ್ಟಗಿ ಶಾಸಕರಾದ ದೊಡ್ಡನಗೌಡ ಪಾಟೀಲ್ ಅವರು ಮಾತನಾಡಿ, ಜಿಲ್ಲೆಯಲ್ಲಿ ರೈತರಿಗೆ ದುಡ್ಡಿನ ಆಮಿಷ ಒಡ್ಡಿ, ಅನಧಿಕೃತವಾಗಿ ಸೋಲಾರ್ ಹಾಗೂ ಪವನ ವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ರೈತರ ಜಮೀನುಗಳನ್ನು ಖರೀದಿಸಲಾಗುತ್ತಿದ್ದು, ಇದಕ್ಕೆ ಎನ್‌ಎ ನೀಡುವಾಗ ಅಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿ ಎನ್‌ಎ ಪ್ರಮಾಣ ಪತ್ರ ನೀಡಬೇಕು. ರೈತರಿಗೆ ಬಂಡಿ ದಾರಿ ಇಲ್ಲದ ಯಾವುದೇ ಎನ್‌ಎ ಅರ್ಜಿಗಳನ್ನು ಪರಿಗಣಿಸಬಾರದು. ಇದರಿಂದ ಬೇರೆ ರೈತರಿಗೆ ಅನಾನುಕೂಲವಾಗುತ್ತಿದೆ. ಜಿಲ್ಲೆಯ ಎಲ್ಲ ತಾಲ್ಲೂಕುಗಳ ಉಪ ನೋಂದಾಣಾಧಿಕಾರಿಗಳ ಕಾರ್ಯಾಲಯದಲ್ಲಿ ಪರಿಶೀಲಿಸಿ ಜಿಲ್ಲೆಯಲ್ಲಿ ಒಟ್ಟು ಎನ್‌ಎ ಪಡೆದ ಭೂಮಿಯನ್ನು ಗುರುತಿಸಿ, ಅದರಲ್ಲಿ ಅಧಿಕೃತ ಹಾಗೂ ಅನಧಿಕೃತ ಎನ್‌ಎ ಜಮೀನುಗಳನ್ನು ವಿಂಗಡಿಸಿ, ತಪ್ಪು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.
ಜಿಲ್ಲೆಯಲ್ಲಿ 2023-24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 33375 ರೈತರಿಗೆ ಒಟ್ಟು 26.17 ಕೋಟಿ ಬೆಳೆ ವಿಮೆ ಮಂಜೂರಾಗಿದ್ದು, ಭೂಮಿ ಸೇರ್ಪಡೆ ಬಾಕಿ ಇದೆ. ಪ್ರಧಾನ ಮಂತ್ರಿ ಕೃಷಿ ಸಮ್ಮಾನ್ ನಿಧಿ ಯೋಜನೆಯಡಿ 2023-24ನೇ ಸಾಲಿನಲ್ಲಿ ಒಟ್ಟು 156745 ರೈತರ ಖಾತೆಗೆ 31.34 ಕೋಟಿ ಪರಿಹಾರ ಜಮೆ ಮಾಡಲಾಗಿದೆ. ಪಿಎಂಎಫ್‌ಎಂಇ ಯೋಜನೆಯಡಿ 53 ಅರ್ಜಿಗಳಿಗೆ ಸಾಲ ಮಂಜೂರಾತಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, 50 ಅರ್ಜಿದಾರರಿಗೆ ಸಾಲ ಮಂಜೂರು ಮಾಡಲಾಗಿದೆ. ಪಿಎಂಎಫ್‌ಎಂಇ ಯೋಜನೆಯ ಬಗ್ಗೆ ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿ ಇಲ್ಲ. ಈ ಯೋಜನೆ ಬಗ್ಗೆ ಜಾಗೃತಿ ಮೂಡಿಸುವ ಅವಶ್ಯಕತೆ ಇದ್ದು, ವಾರದೊಳಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಯೋಜನೆ ಲಾಭ ಪಡೆಯಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಿ ಎಂದು ಜಂಟಿ ಕೃಷಿ ನಿರ್ದೇಶಕರಿಗೆ ಸಂಸದರು ಸೂಚಿಸಿದರು.
ಜಿಲ್ಲೆಯಲ್ಲಿ ಮುಂದಿನ ಆರು ತಿಂಗಳು ಕುಡಿಯುವ ನೀರು, ದನಕರುಗಳಿಗೆ ಮೇವಿನ ಕೊರತೆ ಆಗದಂತೆ ಎಚ್ಚರ ವಹಿಸಿ. ಶಾಲಾ ಮಕ್ಕಳಿಗೆ ಬಿಸಿಯೂಟದಲ್ಲಿ ನೀಡಲಾಗುವ ಮೊಟ್ಟೆ, ಬಾಳೆಹಣ್ಣು ಹಾಗೂ ಶೇಂಗಾ ಚಿಕ್ಕಿಯನ್ನು ನಿಯಮಾನುಸಾರ ವಿತರಿಸಿ. ಇವುಗಳ ಬದಲಿಗೆ ಪರ್ಯಾಯವಾಗಿ ಬೇರೆ ಹಣ್ಣು ಅಥವಾ ಆಹಾರವನ್ನು ನೀಡುವಂತಿಲ್ಲ. ವಿದ್ಯಾರ್ಥಿಗಳಿಗೆ ಅಗತ್ಯ ಸಮಯದಲ್ಲಿ ಸಮವಸ್ತ್ರ ವಿತರಿಸಿ. ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ವಿಶೇಷ ಕ್ರಮ ಕೈಗೊಂಡು ಉತ್ತಮ ಫಲಿತಾಂಶ ಬರುವಂತೆ ಶ್ರಮ ವಹಿಸಿ ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.
ಸಭೆಯಲ್ಲಿ ಗಂಗಾವತಿ ಶಾಸಕರಾದ ಗಾಲಿ ಜನಾರ್ದನ ರೆಡ್ಡಿ, ದಿಶಾ ಸಮಿತಿಯ ಗೌರವಾನ್ವಿತ ಸದಸ್ಯರಾದ ಹನುಮೇಶ ತಿಪ್ಪಣ್ಣ ಯಲಬುರ್ಗಾ, ಸತ್ಯನಾರಾಯಣರಾವ್ ದೇಶಪಾಂಡೆ, ನವೀನ್ ಗುಳಗಣ್ಣನವರ, ಗಣೇಶ ಹೊರತಟ್ನಾಳ, ಶಕುಂತಲಾ ದೇವಿ ಮಾಲಿಪಾಟೀಲ್, ಜಿಲ್ಲಾ ಪಂಚಾಯತಿ ಯೋಜನಾ ನಿರ್ದೇಶಕರಾದ ಕೃಷ್ಣಮೂರ್ತಿ ಪಿ., ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಣ್ಣ ಕಥೆಗಳಿಂದ ವ್ಯಕ್ತಿತ್ವ ವಿಕಸನ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಪಟ್ಟಣದ ಗಂಗಾವತಿ ಭೀಮಪ್ಪನವರ ಸರ್ಕಾರಿ ಪ.ಪೂರ್ವ ಕಾಲೇಜ್‌ನ ಒಂದು ತರಗತಿಯ ಕಲಾ ವಿದ್ಯಾರ್ಥಿಗಳಿಗೆ, ಕನ್ನಡ ಸಾಹಿತ್ಯ ಪರಿಷತ್‌ನಿಂದ ಸಣ್ಣ ಕಥೆಗಳ ಮೂಲಕ ವ್ಯಕ್ತಿತ್ವ ವಿಕಸನ ಕುರಿತು ಉಪನ್ಯಾಸ ಕಾರ್ಯಕ್ರಮ ಮಂಗಳವಾರ ಜರುಗಿತು.
ಬ್ಯಾಂಕ್ ನಿವೃತ್ತ ನೌಕರ ಗಣೇಶರಾವ್ ಹವಲ್ದಾರ್‌ರರು ಉಪನ್ಯಾಸ ನೀಡಿ, ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಕಸನಗೊಳ್ಳಲು ಸಣ್ಣ ಕಥೆಗಳು ಪ್ರೇರಣೆಯಾಗುತ್ತವೆ. ಅವುಗಳಲ್ಲಿ ಒಂದಾದ ಗಡಿಯಾರಕ್ಕೆ ಮುಳ್ಳುಗಳಿರು (ಸಮಯ ತೋರಿಸುವ)ವಂತೆ ಸಮಯ ಪ್ರಜ್ಞೆ, ಕಳೆದು ಹೋಗುವ ಸಮಯ ಮತ್ತೇ ಬಾರದು ಎನ್ನುವ ಪ್ರಬಲವಾದ ನಂಬಿಕೆಗಳು ಕೂಡ ಮನಸ್ಸಿನ ಮೇಲೆ ಪರಿಣಾಮ ಬೀರುವ ಮೂಲಕ ವ್ಯಕ್ತಿತ್ವ ಬೆಳೆಯುತ್ತದೆ ಎಂದರು.
ಕಸಾಪ ತಾಲೂಕು ಅಧ್ಯಕ್ಷ ಗೂಳಪ್ಪ ಹುಲಿಮನಿ ಪ್ರಸ್ತಾವಿಕವಾಗಿ ಮಾತನಾಡಿ, ಇಂದಿನ ಅವಸರದ ಬದುಕಿನಲ್ಲಿ, ಮರೆಯಾಗುತ್ತಿರುವ ಮಾನವೀಯ ಮೌಲ್ಯಗಳನ್ನೊಳಗೊಂಡ ಸಣ್ಣ ಕಥೆಗಳ ಮೂಲಕ ವ್ಯಕ್ತಿತ್ವ ಕಟ್ಟಿ ಕೊಡುವಲ್ಲಿ ಇಂದು ವಿದ್ಯಾರ್ಥಿಗಳಿಗೆ ಬಹಳ ಅನುಕೂಲವಾಗಿದೆ ಎಂದರು.
ಈ ವೇಳೆ ಕಾಲೇಜ್ ಪ್ರಾಚಾರ್ಯರಾದ ಡಾ. ಎಂ.ಕೆ.ದುರುಗಪ್ಪ, ಉಪನ್ಯಾಸಕರಾದ ಪೂರ್ಣಿಮ ಸೇರಿದಂತೆ ಇತರೆ ಉಪನ್ಯಾಸಕರು ಸಿಬ್ಬಂದಿಯವರಿದ್ದರು.

# ಶೀಘ್ರವೇ ಬರ ಪರಿಹಾರ



**ಮೊದಲ ಪುಟದಿಂದ**
ತಮ್ಮ ಹೆಸರಿನಲ್ಲಿರುವ ಎಲ್ಲ ಜಮೀನನ್ನು ನೋಂದಣಿ ಮಾಡಿಸಬೇಕು. ಇದರಿಂದ ಬರ ಪರಿಹಾರಕ್ಕೆ ಅನುಕೂಲವಾಗಲಿದೆ ಎಂದು ರೈತರಿಗೆ ಮನವಿ ಮಾಡಿದರು.
ಈಗಾಗಲೇ ರಾಜ್ಯದ ಬರ ಪರಿಸ್ಥಿತಿಯ ಕುರಿತು, ಕಂದಾಯ ಸಚಿವ ಕೃಷ್ಣ ಭೈರೇಗೌಡ ಹಾಗೂ ತಾವು ದೆಹಲಿಗೆ ತೆರಳಿ, ಕೇಂದ್ರದ ಕೃಷಿ ಸಚಿವರ ಜೊತೆ ಸಭೆ ನಡೆಸಿ, ಕೇಂದ್ರ ಸರ್ಕಾರಕ್ಕೆ ಇಲ್ಲಿನ ಬರ ಪರಿಸ್ಥಿತಿಯ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಈ ತಿಂಗಳ ಅಂತ್ಯದಲ್ಲಿ ಕೇಂದ್ರ ಸರ್ಕಾರವು ಬರ ಪರಿಹಾರದ ಹಣ ಬಿಡುಗಡೆ ಮಾಡಲಿದೆ ಎಂಬ ನಿರೀಕ್ಷೆ ಇದೆ ಎಂದು ಕೃಷಿ ಸಚಿವ ಎನ್. ಚಲುವನಾರಾಯಣಸ್ವಾಮಿ ಅವರು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.
ಕೇಂದ್ರದಿಂದ ಬರ ಪರಿಹಾರ ಬಂದ ತಕ್ಷಣ, ಸಣ್ಣ ಮತ್ತು ಅತಿ ಸಣ್ಣ ರೈತರ ಭೂಮಿಯನ್ನು ಇಂತಿಷ್ಟು ಹಾನಿ ಎಂದು ಪರಿಗಣಿಸಿ, ಫ್ರೂಟ್ಸ್ ತತ್ರಾಂಶದ ಮೂಲಕ ನೇರವಾಗಿ ರೈತರಿಗೆ ಬರ ಪರಿಹಾರವನ್ನು ನೀಡಲಾಗುತ್ತದೆ ಎಂದು ವಿವರಿಸಿದರು.
ಸಂಡೂರು ಶಾಸಕ ಈ.ತುಕಾರಾಂ ಅವರು ಮಾತನಾಡಿ, ಈ ಭಾಗದಲ್ಲಿ ಅತಿ ಹೆಚ್ಚು ಬರ ಹಿನ್ನಲೆಯಲ್ಲಿ, ಮುಂಜಾಗ್ರತಾ ಕ್ರಮವಾಗಿ ಕುಡಿಯುವ ನೀರಿನ ಟ್ಯಾಂಕರ್ ವ್ಯವಸ್ಥೆ, ಕ್ಲಿನಿಕ್ ಆನ್ ವೀಲ್ ಮುಖಾಂತರ ಆರೋಗ್ಯ ಸೇವೆ ಸೇರಿದಂತೆ ಇತರೆ ಸೇವೆ ಒದಗಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಕೃಷಿ ಜಂಟಿ ನಿರ್ದೇಶಕ ಕೆ. ಮಲ್ಲಿಕಾರ್ಜುನ, ಉಪ ನಿರ್ದೇಶಕ ಕೆಂಗೆಗೌಡ, ತೋಟಗಾರಿಕೆ ಉಪನಿರ್ದೇಶಕ ಸಂತೋಷ್ ಸಪ್ಪಂಡಿ, ತಹಶೀಲ್ದಾರ ಪವನ್ ಕುಮಾರ್, ತಾಲ್ಲೂಕು ಕೃಷಿ ಸಹಾಯಕ ನಿರ್ದೇಶಕ ಮಂಜುನಾಥ, ತೋಟಗಾರಿಕೆ ಸಹಾಯಕ ನಿರ್ದೇಶಕ ಹನುಮಂತಪ್ಪ ನಾಯ್ಕ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ರೈತರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಇ-ಪೇಪರ್ ಉಚಿತ
ಇಂದೇ ಹಂಪಿ ಟೈಮ್ಸ್ ವಾಟ್ಸಪ್ ಚಾನಲ್‌ಗೆ ಸೇರಿ,
ಇ-ಪೇಪರ್ ಉಚಿತವಾಗಿ ಪಡೆಯಿರಿ







Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA